# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಜೂನ್12, 2022

ಸಂಪುಟ : 49 ಸಂಚಿಕೆ : 29 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ದೇಗುಲಕ್ಕಿಂತ ಶಾಲೆಗಳ ನಿರ್ಮಾಣ ಅಗತ್ಯ



### ನಲ್ಕುಂದ ಗ್ರಾಮದ ಶಾಲಾ ಕೊಠಡಿ ಉದ್ಘಾಟಿಸಿದ ಕೃಷಿ ಸಚಿವ ಪಾಟೀಲ್

ದಾವಣಗೆರೆ, ಜೂ.11- ದೇಗುಲಗಳ ನಿರ್ಮಾಣಕ್ಕಿಂತ ಶಾಲಾ ಕೊಠಡಿಗಳ ನಿರ್ಮಾಣ ಇಂದಿನ ಅಗತ್ಯವಾಗಿದೆ. ಜನಪ್ರತಿನಿಧಿಗಳ ಬಳಿ ದೇಗುಲಗಳ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಕೇಳುವ ಬದಲು, ತಮ್ಮ ಗ್ರಾಮಕ್ಕೆ ಅಗತ್ಯವಿರುವ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸುವುದು ಸೂಕ್ತ ಎಂದು ಕೃಷಿ ಸಚಿವ ಬಿ.ಸಿ ಪಾಟೀಲ್ ಅಭಿಪ್ರಾಯಪಟ್ಟರು.

ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ದಯಾನಂದ ಓ.ಎಸ್ ದಂಪತಿ ಕೊಡುಗೆಯಾಗಿ ನಿರ್ಮಿಸಿ ಕೊಟ್ಟ 4 ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಓದಿ ಉನ್ನತ ಹುದ್ದೆಯಲ್ಲಿರುವವರು ಇಂತಹದೊಂದು ದೇಣಿಗೆ ನೀಡುವ ಮೂಲಕ ಸಹಕರಿಸಿದರೆ ಸರ್ಕಾರಿ ಶಾಲೆಗಳು ಮತ್ತಷ್ಟು ಸುಧಾರಣೆಯಾಗಲಿವೆ. ತನ್ಮೂಲಕ ಬಡವರ ಮಕ್ಕಳ ಶಿಕ್ಷಣಕ್ಕೆ ಪುಷ್ಠಿ ನೀಡಿದಂತಾಗುತ್ತದೆ ಎಂದರು.

ಭವಿಷ್ಯದ ನಾಯಕರನ್ನು ರೂಪಿಸುವ ಕಾರ್ಯ ಶಾಲಾ ಹಂತದಲ್ಲೇ ನಡೆಯುತ್ತದೆ. ಹಾಗಾಗಿ ದೇವಾಲಯ ನಿರ್ಮಾಣಕ್ಕಿಂತಲೂ ಪುಣ್ಯದ ಕೆಲಸ ಶಾಲೆಗಳನ್ನು ನಿರ್ಮಾಣ ಮಾಡುವುದಾಗಿದೆ ಎಂದು ಹೇಳಿದರು.

ತಮಗೆ ಬದುಕು ಕಟ್ಟಿಕೊಟ್ಟ ಊರನ್ನು ಮರೆಯದೆ, ತಾವು ಓದಿದ್ದ ಶಾಲೆಗೆ ಕಟ್ಟಡಗಳನ್ನು ನಿರ್ಮಾಣ ಮಾಡುವುದರ ಮೂಲಕ ಅನೇಕರಿಗೆ ಸ್ಫೂರ್ತಿಯಾಗಿದ್ದಾರೆ ಎಂದು ದಯಾನಂದ ಕುಟುಂಬದ ಕಾರ್ಯವನ್ನು ಶ್ಲಾಘಿಸಿದರು.

ದೇಶದಲ್ಲಿ ಅನ್ನ ಸೃಷ್ಠಿ ಮಾಡುವ ಶಕ್ತಿ ರೈತರಿಗೆ ಮಾತ್ರ ಇದೆ. ರೈತರ ಬದುಕಿನಲ್ಲಿ ಚೈತನ್ಯ ತುಂಬಲು ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ರೈತ ಸಾಲಗಾರನಾಗಬಾರದೆಂಬ ಸದುದ್ದೇಶದಿಂದ ಕೇಂದ್ರ ಸರ್ಕಾರ ರಸಗೊಬ್ಬರಗಳಿಗೆ ಸಹಾಯಧನ ಒದಗಿಸುತ್ತಿದೆ. 53 ಲಕ್ಷ ರೈತರಿಗೆ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಜಾರಿ ಮಾಡಿದೆ ಎಂದರು.

ಕೃಷಿ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಉದ್ದೇಶ ಹೊಂದಲಾಗಿದೆ. ರೈತರು ಸಮಗ್ರ ಕೃಷಿ ನೀತಿ ಅಳವಡಿಸಿಕೊಳ್ಳಬೇಕು, ಬಿತ್ತನೆ ಮಾಡುವ ಮುನ್ನ ಮಣ್ಣಿನ ಪರೀಕ್ಷೆ ಮಾಡಿಸಬೇಕು. ಭೂಮಿಗೆ ಬೇಕಾದ ಅಗತ್ಯ ಪೋಷಕಾಂಶ ಮತ್ತು ಲವಣಾಂಶಗಳನ್ನು ಒದಗಿಸುವ ಕೆಲಸ ಮಾಡಿದಾಗ ಮಾತ್ರ ಹೆಚ್ಚಿನ (2ನೇ ಪುಟಕ್ಕೆ)

## ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ

### ನೂಪುರ್ ಹೇಳಿಕೆ ವಿವಾದದ ಹಿನ್ನೆಲೆಯಲ್ಲಿ ಕ್ರಮಕ್ಕೆ ಸಿಎಂ ಸೂಚನೆ

ಬೆಂಗಳೂರು, ಜೂ. 11 - ಪ್ರವಾದಿ ಮೊಹಮ್ಮದ್ ಪೈಗಂಬರರ ಕುರಿತ ಹೇಳಿಕೆಯಿಂದ ಹಲವೆಡೆ ಹಿಂಸಾಚಾರ ನಡೆದಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಪೊಲೀಸರು ಮುಂದಾಗಿದ್ದಾರೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸೂಚನೆಯಂತೆ ಹಿರಿಯ ಅಧಿಕಾರಿಗಳು ಸಭೆ ನಡೆಸಿ, ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ಮತ್ತು ಬಿಗಿ ಬಂದೋಬಸ್ತ್ ಮಾಡಲು ತೀರ್ಮಾನ ಕೈಗೊಂಡಿದ್ದಾರೆ.

ನಗರ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠರು ಆಯಾ ಪ್ರದೇಶಗಳಲ್ಲಿ ಕೋಮು ಸೌಹಾರ್ದತೆ ಸಭೆ ನಡೆಸಬೇಕು ಹಾಗೂ ಮುನ್ನೆಚ್ಚರಿಕೆಯಾಗಿ ಗೂಂಡಾಗಳನ್ನು ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ್ದಾರೆ.

ಕೋಮು ಗಲಭೆ ನಡೆಯುವ ಪ್ರದೇಶಗಳಲ್ಲಿ ದಿನವಿಡೀ ಬಂದೋಬಸ್ತ್ ವಹಿಸಬೇಕು ಹಾಗೂ ಮುನ್ನೆಚ್ಚರಿಕೆಯಾಗಿ ಕಿಡಿಗೇಡಿಗಳ ಮೇಲೆ ಕಣ್ಣಿಡುವಂತೆ ಸ್ಥಳೀಯ ಠಾಣೆಗಳಿಗೆ ಆದೇಶ ನೀಡಿರುವುದಲ್ಲದೆ, ಗುಪ್ತಚರ ವಿಭಾಗ ಪರಿಸ್ಥಿತಿಯ ಬಗ್ಗೆ ಜಿಲ್ಲಾಡಳಿತಕ್ಕೆ ಆಗಿಂದಾಗ್ಗೆ ಮಾಹಿತಿ ನೀಡುವಂತೆ ಹೇಳಲಾಗಿದೆ.

ಪೈಗಂಬರ್ ಕುರಿತು ಹೇಳಿಕೆ ನೀಡಿದ್ದರಿಂದ ಬಿಜೆಪಿಯಲ್ಲಿ ಅಮಾನತ್ತುಗೊಂಡಿರುವ ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ದೆಹಲಿ, ಉತ್ತರ ಪ್ರದೇಶ, ಕೊಲ್ಕೊತಾ, ಪಂಜಾಬ್ ಸೇರಿದಂತೆ ದೇಶದ ಹಲವೆಡೆ ಮುಸ್ಲಿಮರು ಪ್ರತಿಭಟನೆ ನಡೆಸಿದ್ದಾರೆ. ಮತ್ತೆ ಕೆಲವೆಡೆ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ, (2ನೇ ಪುಟಕ್ಕೆ)

## ಎಸ್‌ಡಿಪಿಐ ಜನಾಧಿಕಾರ ಸಮಾವೇಶ ರದ್ದು

### ಪಾಲಿಕೆ ವ್ಯಾಪ್ತಿಯಲ್ಲಿಂದು ನಿಷೇಧಾಜ್ಞೆ ಜಾರಿ: ಎಸ್ಪಿ

ದಾವಣಗೆರೆ, ಜೂ.11- ಪ್ರವಾದಿಗಳ ಕುರಿತು ವಿವಾದಾತ್ಮಕ ಹೇಳಿಕೆಯಿಂದ ದೇಶದ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜೂ.12ರಂದು ನಗರದಲ್ಲಿ ನಡೆಸಲು ಉದ್ದೇಶಿಸಿದ್ದ ಎಸ್‌ಡಿಪಿಐ ಸಂಘಟನೆಯ ಜನಾಧಿಕಾರ ಸಮಾವೇಶಕ್ಕೆ ಅನುಮತಿ ನೀಡದೇ ರದ್ದುಪಡಿಸಲಾಗಿದೆ. ಅಲ್ಲದೇ ನಗರದಲ್ಲಿ 144ನೇ ಸೆಕ್ಷನ್ ನಿಷೇಧಾಜ್ಞೆ ಜಾರಿಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿದ್ದಾರೆ.



ನಗರದಲ್ಲಿ ಎಸ್.ಡಿ.ಪಿ.ಐ ಕರ್ನಾಟಕ ವತಿಯಿಂದ ಆಯೋಜಿಸಲಾಗಿದ್ದ ಜನಾಧಿಕಾರ ಸಮಾವೇಶವನ್ನು ರದ್ದುಗೊಳಿಸಲು ಅಯೋಜಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ನಗರಪಾಲಿಕೆ ವ್ಯಾಪ್ತಿಯಲ್ಲಿ ಶನಿವಾರ ಸಂಜೆ 6 ಗಂಟೆಯಿಂದ ಭಾನುವಾರ ರಾತ್ರಿ 10 ಗಂಟೆಯವರೆಗೆ ಯಾವುದೇ ರ್‍ಯಾಲಿ, ಪ್ರತಿಭಟನೆ, ಮೆರವಣಿಗೆ, ಸಮಾವೇಶ ನಡೆಯದಂತೆ ಮತ್ತು ಗುಂಪು ಸೇರದಂತೆ 144ನೇ ಸೆಕ್ಷನ್ ಜಾರಿಗೊಳಿಸಲಾಗಿದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಮ್ಮ ಕಚೇರಿಯಲ್ಲಿ ಇಂದು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರವಾದಿ ಮಹಮ್ಮದ್ ಪೈಗಂಬರ್ ಕುರಿತಾಗಿ ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರು ಅವಹೇಳನಕಾರಿ ಹೇಳಿಕೆ ನೀಡಿರುವ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸಲಾಗುತ್ತಿದೆ. ಎಸ್.ಡಿ.ಪಿ.ಐ. ಜನಾಧಿಕಾರ ಸಮಾವೇಶದ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಮತೀಯ ಭಾವನೆಗಳಿಗೆ ಧಕ್ಕೆಯುಂಟು ಮಾಡಿ ಕಾನೂನು ಸುವ್ಯವಸ್ಥೆಗೆ ಭಂಗ ಉಂಟು ಮಾಡುವ ಸಾಧ್ಯತೆ ಗಳಿರುವುದರಿಂದ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಭಾನುವಾರದ ಜನಾಧಿಕಾರ ಸಮಾವೇಶ ರದ್ದಾಗಿದೆ ಎಂದು ಅವರು ಹೇಳಿದರು. ಸಮಾವೇಶ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಎಲ್ಲಾ ಮುಸ್ಲಿಂ ಮುಖಂಡರೊಂದಿಗೆ ಸಭೆ ನಡೆಸಲಾಗಿದೆ. ಮತ್ತೊಂದು ದಿನ ಕಾರ್ಯಕ್ರಮ ನಡೆಸಲು ಅನುಮತಿ ನೀಡಲಾಗಿದೆ. (2ನೇ ಪುಟಕ್ಕೆ)

## ಮಹಿಳೆ ಸುಶಿಕ್ಷಿತೆ ಎಂಬ ಕಾರಣಕ್ಕಾಗಿ ಕೆಲಸಕ್ಕೆ ಒತ್ತಡ ಹೇರುವಂತಿಲ್ಲ : ಹೈಕೋರ್ಟ್

ಮುಂಬೈ, ಜೂ. 11 – ಮಹಿಳೆ ಸುಶಿಕ್ಷಿತೆ ಎಂಬ ಕಾರಣಕ್ಕಾಗಿ ಕೆಲಸಕ್ಕೆ ಹೋಗುವಂತೆ ಒತ್ತಡ ಹೇರಲಾಗದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ವಿಚ್ಛೇದನ ಪ್ರಕರಣವೊಂದರ ವಿಚಾರಣೆಯಲ್ಲಿ ಈ ನಿಲುವು ತಳೆದಿರುವ ನ್ಯಾಯಮೂರ್ತಿ ಭಾರತಿ ಡಾಂಗ್ರೆ ಅವರ ಏಕಸದಸ್ಯ ಪೀಠ, ವಿರಸಿತ ಪತ್ನಿಗೆ ಜೀವನಾಂಶ ನೀಡುವಂತೆ ಆದೇಶಿಸಿದೆ.

ಕೆಲಸ ಮಾಡುವುದು, ಇಲ್ಲವೇ ಮನೆಯಲ್ಲಿರುವುದು ಮಹಿಳೆಯ ಆಯ್ಕೆಗೆ ಬಿಟ್ಟ ವಿಷಯ. ಮಹಿಳೆ ಪದವೀಧರೆಯಾಗಿದ್ದು, ಕೆಲಸಕ್ಕೆ ಅರ್ಹತೆ ಹೊಂದಿದ್ದರೂ ಸಹ ದುಡಿಯುವಂತೆ ಒತ್ತಾಯಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

ಕೆಲಸಕ್ಕೆ ತೆರಳುವುದು ಮಹಿಳೆಯ ಆಯ್ಕೆಗೆ ಬಿಟ್ಟ ವಿಷಯ. ಗೃಹಿಣಿಯಾದ ಮಹಿಳೆ ಹಣಕಾಸು ವಿಷಯದಲ್ಲೂ ಭಾಗಿಯಾಗಬೇಕು ಎಂದು ಒಪ್ಪುವ (2ನೇ ಪುಟಕ್ಕೆ)

## ನವಜಾತ ಶಿಶು ಮಾರಾಟ: ನಾಲ್ವರ ಬಂಧನ

ದಾವಣಗೆರೆ, ಜೂ.11- ನವಜಾತ ಶಿಶು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 2ರಂದು ಬಸಪ್ಪ (55) ಎಂಬಾತ ತನ್ನ ಪುತ್ರಿ ಸುಚಿತ್ರ ಅವರ ಗಂಡು ಮಗುವನ್ನು ಭೀಮವ್ವ ಮತ್ತು ಹಾಲಪ್ಪ ಎಂಬುವರಿಗೆ 50 ಸಾವಿರ ರೂ.ಗೆ ಮಾರಾಟ ಮಾಡಿದ್ದ. ಮಧ್ಯವರ್ತಿ ಪರಶುರಾಮ್ ಎಂಬ ವ್ಯಕ್ತಿ ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮಗುವಿನ ಅಜ್ಜ, ಖರೀದಿಸಿದ ವ್ಯಕ್ತಿಗಳು, ಮಧ್ಯವರ್ತಿಗಳನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಕರಣ ಸಂಬಂಧ 24 ಗಂಟೆಯಲ್ಲೇ ಮಗುವನ್ನು ಪತ್ತೆ ಮಾಡಿ, ಮಧ್ಯವರ್ತಿ ಪರಶುರಾಮ್ (2ನೇ ಪುಟಕ್ಕೆ)

## ಅಕ್ರಮ ವಲಸೆ-ಆಶ್ರಯ: ನಿಗಾಕ್ಕೆ ಆದೇಶ

ಬೆಂಗಳೂರು, ಜೂ. 11 - ಅಕ್ರಮ ವಲಸಿಗರು ಹಾಗೂ ಅವರಿಗೆ ಆಶ್ರಯ ಹಾಗೂ ಇನ್ನಿತರೆ ಸಹಕಾರ ಹಾಗೂ ಸಹಾಯವನ್ನು ಒದಗಿಸುತ್ತಿದ್ದವರ ವಿರುದ್ಧ ತೀವ್ರ ನಿಗಾ ವಹಿಸಬೇಕು ಮತ್ತು ಅಕ್ರಮ ಚಟುವಟಿಕೆಗಳಿಗೆ ನಿಯಂತ್ರಣ ಹೇರಬೇಕು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಪೊಲೀಸ್ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ವಲಸೆ ಸಮಸ್ಯೆಯನ್ನು ನಮ್ಮ ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದ್ದು,

> ರಾಜ್ಯದ ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ನೆಲೆಸಿರುವವರ ಬಗ್ಗೆ ಸಮೀಕ್ಷೆ ನಡೆಸಿ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.
> - ಅರಗ ಜ್ಞಾನೇಂದ್ರ, ಗೃಹ ಸಚಿವ

ಅಕ್ರಮ ವಲಸಿಗರು ಮತ್ತು ಅವರಿಗೆ ಆಶ್ರಯ ಹಾಗೂ ಇನ್ನಿತರೆ ಸಹಕಾರ ಒದಗಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಕೆಲವು ದಿನಗಳ ಹಿಂದೆ, ಜಮ್ಮು ಮತ್ತು ಕಾಶ್ಮೀರ ಪೊಲೀಸರು ತಲೆ ತಪ್ಪಿಸಿಕೊಂಡು ಬೆಂಗಳೂರಿನಲ್ಲಿ ನೆಲೆಸಿದ್ದ ಭಯೋತ್ಪಾದಕನೊಬ್ಬನನ್ನು ಬಂಧಿಸಿದ್ದರು. ಇದಾದ ನಂತರ ಬೆಂಗಳೂರು ಗ್ರಾಮಾಂತರ ಪೊಲೀಸರು ಅಕ್ರಮ ಬಾಂಗ್ಲಾದೇಶಿ ನುಸುಳುಕೋರರಿಗೆ, ಆಧಾರ್ ಕಾರ್ಡ್ ಹಾಗೂ ಇನ್ನಿತರೆ ದಾಖಲೆಗಳನ್ನು ಒದಗಿಸುತ್ತಿದ್ದ ಜಾಲವೊಂದನ್ನು ಭೇದಿಸಿದ್ದಾರೆ. (2ನೇ ಪುಟಕ್ಕೆ)

## ಶರಣರ ವಚನಗಳು ಅಕ್ಷಯ ನಿಧಿ

### ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ.ಎಸ್.ಬಿ. ರಂಗನಾಥ್



ದಾವಣಗೆರೆ, ಜೂ. 11 - ಶರಣರ ವಚನಗಳು ಅಕ್ಷಯ ನಿಧಿಯಂತಿವೆ. ಸಮಾಜ ಸುಧಾರಣೆಗಾಗಿ ವಚನಗಳ ಅಗತ್ಯವಿದೆ ಎಂದು ಸಿರಿಗೆರೆ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್ ಅಭಿಪ್ರಾಯಪಟ್ಟಿದ್ದಾರೆ.

ಶಿವಶರಣರ ವಚನಗಳು ಹಾಗೂ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ರೂಪಿಸಿರುವ ಶಿವಶರಣರ ವಚನ ಸಂಪುಟ ತಂತ್ರಾಂಶದ ಪ್ರಾತ್ಯಕ್ಷಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ನಗರದ ಮಾಗನೂರು ಬಸಪ್ಪ ಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅಸ್ಪೃಶ್ಯತೆ ಹಾಗೂ ಮೇಲು - ಕೀಳು ನಿವಾರಣೆ ಮತ್ತು ಮಹಿಳಾ ಸಮಾನತೆಯಂತಹ ಸುಧಾರಣೆಗಳಿಗಾಗಿ ವಚನಗಳ ಅಗತ್ಯವಿದೆ. ವಚನಗಳು ನಮ್ಮ ಹಾಗೂ ನಮ್ಮ ಮಕ್ಕಳ ಬಾಳಿಗೆ ಅತ್ಯಗತ್ಯ ಎಂದವರು ಅಭಿಪ್ರಾಯಪಟ್ಟರು.

ವಚನಗಳ ಬಗ್ಗೆ ನಮಗೆ ಅರಿವಿದೆ. ಆದರೆ, ಅವುಗಳನ್ನು ಆಚರಣೆಗೆ ತರದೇ ಇರುವುದು ದುರಾದೃಷ್ಟಕರ. ವಿದ್ಯಾರ್ಥಿಗಳು ಮನಸ್ಸು ಮಾಡಿ ದರೆ ವಚನಗಳನ್ನು ಆಚರಣೆಗೆ ತರುವಲ್ಲಿ ಯಶಸ್ಸು ಕಾಣಬಹುದು. ಈ ಹಿನ್ನೆಲೆಯಲ್ಲಿ ಶಿಕ್ಷಕರು ವಚನಗಳ ತಂತ್ರಾಂಶ ಹೆಚ್ಚು ಬಳಸಿಕೊಂಡು (2ನೇ ಪುಟಕ್ಕೆ)

## ಪಠ್ಯ ಪರಿಷ್ಕರಣೆ: ವಿರೂಪಕ್ಕೆ ಸ್ವರೂಪ ಕೊಡುವ ಕೆಲಸ



### 'ಪಠ್ಯ ಪುಸ್ತಕ ಪರಿಷ್ಕರಣೆ ಸತ್ಯ ಮತ್ತು ಮಿಥ್ಯ' ವಿಷಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ವಿನಯ್ ಬಿದರೆ

ದಾವಣಗೆರೆ, ಜೂ.11- ಈ ಮಣ್ಣಿನ ನೆಲದ ಮೂಲ ಗುಣಕ್ಕೆ ಅನುಗುಣವಾದ ಪಠ್ಯವನ್ನು ಬರಗೂರು ರಾಮಚಂದ್ರಪ್ಪ ನೇತೃತ್ವದಲ್ಲಿ ಪಠ್ಯ ಪರಿಷ್ಕರಣಾ ಸಮಿತಿ ವಿರೂಪಗೊಳಿಸಿದ್ದರೆ, ರೋಹಿತ್ ಚಕ್ರವರ್ತಿ ನೇತೃತ್ವದ ಸಮಿತಿ ವಿರೂಪಕ್ಕೆ ಸ್ವರೂಪ ಕೊಡುವ ಕೆಲಸ ಮಾಡಿದೆ ಎಂದು ಸಾಮಾಜಿಕ ಕಾರ್ಯಕರ್ತ ವಿನಯ್ ಬಿದರೆ ಪ್ರತಿಪಾದಿಸಿದರು.

'ವರ್ತಮಾನ' ಫೋರಂ ಫಾರ್ ಇಂಟಲೆಕ್ಚುಯಲ್ ಡಿಬೆಟ್ಸ್ ವತಿಯಿಂದ ನಗರದ ಶರಣ ಮಾಗನೂರು ಬಸಪ್ಪ ಕಾಲೇಜು ಸಭಾಂಗಣದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ 'ಪಠ್ಯ ಪುಸ್ತಕ ಪರಿಷ್ಕರಣೆ ಸತ್ಯ ಮತ್ತು ಮಿಥ್ಯ' ವಿಷಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸತ್ಯ ಹೇಳುವಾಗ ವಿರೋಧ, ಅಡೆ ತಡೆಗಳು ಸಹಜ. ಆದರೆ 75ನೇ ವರ್ಷದ ಸ್ವಾತಂತ್ರ್ಯೋತ್ಸವ ಆಚರಣೆ ಸಂದರ್ಭದಲ್ಲೂ ಮಕ್ಕಳಿಗೆ ಸತ್ಯ ಹೇಳದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ. ಈ ನಾಡಿನ ಮಣ್ಣಿಗೆ ಅಪಮಾನ ಮಾಡಿದಂತಾಗುತ್ತದೆ. ಅಪಮಾನ ತೊಡೆದುಹಾಕಿ, ಅನ್ಯಾಯವನ್ನು ಪಕ್ಕಕ್ಕಿಟ್ಟು ಸರಿಯಾದ ಇತಿಹಾಸ ಹೇಳಿಕೊಡುವ ಅಗತ್ಯತೆ ಪ್ರಸ್ತುತ ಸಂದರ್ಭದಲ್ಲಿದೆ ಎಂದು ಹೇಳಿದರು.

ರಾಷ್ಟ್ರೀಯತೆಯ ವಿಚಾರಗಳನ್ನು ಕಿತ್ತುಹಾಕಿ, ಜಾತಿ ಭೇದ ಹೆಚ್ಚಿಸುವ ಪಠ್ಯಗಳನ್ನು ಸೇರಿಸಲಾಗಿತ್ತು. ಇಂತಹ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 16, 17 ರಂದು ಸಾಮಾನ್ಯ ಪ್ರವೇಶ ಪರೀಕ್ಷೆ

ದಾವಣಗೆರೆ, ಜೂ.11- ಜಿಲ್ಲೆಯಲ್ಲಿ ಇದೇ ದಿನಾಂಕ 16 ಮತ್ತು 17 ರಂದು ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಮುಂಜಾಗ್ರತೆ ವಹಿಸಿ ಸುಗಮವಾಗಿ ಪರೀಕ್ಷೆಗಳನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ಅಪರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ 19 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 9168 ಪರೀಕ್ಷಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷೆಯ ಅವಧಿಯಲ್ಲಿ ಕೇಂದ್ರಗಳ ಸುತ್ತ ಮುತ್ತಲಿರುವ ಜೆರಾಕ್ಸ್ ಅಂಗಡಿಗಳು ಹಾಗೂ ಸೈಬರ್ ಕೆಫೆಗಳಿಗೆ ತೆರೆಯಲು ಅವಕಾಶ ಇರುವುದಿಲ್ಲ. ಪರೀಕ್ಷಾರ್ಥಿಗಳು ಹಾಗೂ ಮೇಲ್ವಿಚಾರಕರ ಮೊಬೈಲ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕರ್ತವ್ಯ ನಿರ್ವಹಿಸಲು ನೇಮಕಾತಿ ಆದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತು ಪಡಿಸಿ ಪರೀಕ್ಷಾ (2ನೇ ಪುಟಕ್ಕೆ)


## ಆಮ್ ಆದ್ಮಿ ಪಾರ್ಟಿ: ಹರಿಹರ ತಾಲ್ಲೂಕಿನಾದ್ಯಂತ ಅಬ್ಬರದ ಪ್ರಚಾರ

ಹರಿಹರ, ಜೂ.11 - ವಿಧಾನಸಭಾ ಕ್ಷೇತ್ರದ ಹಾಗು ಹರಿಹರದ ತಾಲ್ಲೂಕು ಅಧ್ಯಕ್ಷರು, ಹರಿಹರ ಕ್ಷೇತ್ರದ ಆಮ್ ಆದ್ಮಿ ಪಾರ್ಟಿ ಆಕಾಂಕ್ಷಿ ಆದ ಶ್ರೀ ಮಲ್ಲಿನಾಥ್ ವೈ.ಎನ್. ರವರು ಹರಿಹರ ಹಾಗು ಅವರ ಕ್ಷೇತ್ರದ ಬಹಳಷ್ಟು ಹಳ್ಳಿಗಳಲ್ಲಿ ಬಿರುಸಿನ ಪ್ರಚಾರವನ್ನು ಮಾಡುತ್ತಿದ್ದು, ದೆಹಲಿಯ ಜನಪರ ಕೆಲಸಗಳಾದ, ಸರ್ಕಾರಿ ಶಾಲೆ ಹಾಗು ಕಾಲೇಜುಗಳಲ್ಲಿ ಹೈಟೆಕ್ ಕಟ್ಟಡದ,




ಕೊಠಡಿ ಅದರಲ್ಲಿ ಲಿಫ್ಟ್, ದೊಡ್ಡ ಆಟದ ಮೈದಾನ, ಹೈಟೆಕ್ ಪ್ರಯೋಗಾಲಯ ಖಾಸಗಿ ಶಾಲೆಗಳನ್ನು ಮೀರಿಸುವ ಕಟ್ಟಡ ಹಾಗು ಸ್ವಚ್ಛತೆ ಇದರ ಬಗ್ಗೆ ಮತ್ತೆ ತಿಂಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ಸೇವೆ, ಪಡಿತರ ಸೇವೆ ಜನರ ಮನೆಗೆ ತಲುಪಿಸುವ, ತಿಂಗಳಿಗೆ 20,000 ಲೀಟರ್ ಉಚಿತ ಶುದ್ಧ ಕುಡಿಯುವ ನೀರು, ಸರ್ಕಾರದ ಸೇವೆಗಳಾದ ರೇಷನ್ ಕಾರ್ಡ್, ಜನನ ಪ್ರಮಾಣ ಪತ್ರ, ಇನ್ನೂ ಅನೇಕ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ, ಹೈಟೆಕ್ ಸರ್ಕಾರಿ ಆಸ್ಪತ್ರೆ, ರೂ. ನಲವತ್ತು ಲಕ್ಷದಷ್ಟು ಉಚಿತ ಶಸ್ತ್ರ ಚಿಕಿತ್ಸೆ ಅದು ಸರ್ಕಾರಿ ಆಸ್ಪತ್ರೆಗಳಲ್ಲಿ, ದೆಹಲಿಯಲ್ಲಿ ವಾರ್ಡ್‌ಗೆ ಒಂದರಂತೆ 24 ಗಂಟೆ ತೆರಿದಿರುವ ಮೊಹಲ್ಲಾ ಕ್ಲಿನಿಕ್ ಇದರಲ್ಲಿ ಎಲ್ಲಾ ರೀತಿಯ ಪ್ರಯೋಗಾಲಯ ಉಚಿತ ಔಷಧಿ, ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ, ಗುಣಮಟ್ಟದ ರಸ್ತೆಗಳು, ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕಾಗಿ ಯಾವುದೇ ಭದ್ರತೆ ಇಲ್ಲದೇ ಶಿಕ್ಷಣ ಸಾಲ, ಮಕ್ಕಳಲ್ಲಿ ಉದ್ಯಮ ಶೀಲತೆ ಬೆಳೆಸಿಕೊಳ್ಳಲು 'ಬಿಸಿನಸ್ ಬ್ಲಾಸ್ಟರ್ಸ್' ಎಂಬ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲಾ 2000 ಮೂಲ ಬಂಡವಾಳವನ್ನು ಸರ್ಕಾರವೇ ನೀಡುತ್ತದೆ. ಈ ಸಾಲವನ್ನು 6 ವಾರಗಳಲ್ಲಿ ವಿದ್ಯಾರ್ಥಿಗಳು ಹಿಂತಿರುಗಿಸುವ ಪ್ರಕ್ರಿಯೆನ್ನು ಹಮ್ಮಿಕೊಂಡಿರುವುದು ದೇಶದ ಇತಿಹಾಸದಲ್ಲೇ ಇದೇ ಮೊದಲ ಬಾರಿ, ಉದ್ಯೋಗ ಬೇಡುವವರ ಬದಲಿಗೆ ಉದ್ಯೋಗ ನೀಡುವವರನ್ನು ದೆಹಲಿಯ ಶ್ರೀ ಅರವಿಂದ್ ಕೇಜ್ರಿವಾಲ್ ಸರ್ಕಾರ ತಯಾರಿ ನಡೆಸುತ್ತಿದೆ. ಈ ರೀತಿಯ ಕರಪತ್ರಗಳನ್ನು ಹರಿಹರದ ಆಕಾಂಕ್ಷಿ, ಅಧ್ಯಕ್ಷರು ಶ್ರೀಯುತ ಮಲ್ಲಿನಾಥ್ ವೈ. ಎನ್.ರವರು ಮುದ್ರಿಸಿ ಹರಿಹರ ನಗರ ಹಾಗೂ ತಾಲ್ಲೂಕಿನ ಎಲ್ಲಾ ಹಳ್ಳಿಗಳ ಮತದಾರರಿಗೂ ಕರಪತ್ರವನ್ನು ನೀಡುವುದರ ಮೂಲಕ ಆಮ್ ಆದ್ಮಿ ಪಾರ್ಟಿಯ ಜನಪರ ಸೇವೆಗಳನ್ನು ತಿಳಿಸುತ್ತಿದ್ದಾರೆ, ತಾಲ್ಲೂಕಿನ ಮತದಾರರು ಆಮ್ ಆದ್ಮಿ ಪಾರ್ಟಿಯ ಜನಪರ ಸೇವೆಗೆ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಿದ್ದಾರೆ. ADVT



|| ಶ್ರೀ ವಿಘ್ನೇಶ್ವರ ಸ್ವಾಮಿ ಪ್ರಸನ್ನ || || ಹಂಪಿ ಶ್ರೀ ಉದ್ದಾನ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ|| || ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ||

## ಹನ್ನೆರಡನೇ ವರ್ಷದ ಚಿರಸ್ಮರಣೆ



### ವೇ|| ಶ್ರೀ ಟಿ.ಹೆಚ್.ಎಂ. ಕಾಶೀನಾಥ್

ಜನನ : 10.10.1947, ಶಿವಸಾಯುಜ್ಯ : 12.06.2010

ವಾಣಿಶ್ರೀ ಟೀ, ಕಾಫಿ ಕಂಪನಿ ಮಾಲೀಕರು, ಚಾಮರಾಜಪೇಟೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳು ಕಳೆದವು, ನಿಮ್ಮ ಸರಳ ಜೀವನ, ಅಪರೂಪದ ಸಾತ್ವಿಕ ವ್ಯಕ್ತಿತ್ವ, ಸಮಾಜದ ಮೇಲಿನ ಕಳಕಳಿ, ಬಂಧು-ಮಿತ್ರರೊಂದಿಗಿನ ವಿಶ್ವಾಸ, ಸಂತೃಪ್ತಿಯ ಜೀವನ ನಮಗೆ ಇಂದಿಗೂ ದಾರಿದೀಪವಾಗಿದೆ. ಆ ಭಗವಂತನು ತನ್ನ ದೈವೀಕ ಸ್ವರ್ಗದಲ್ಲಿ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಸದಾ ನಿಮ್ಮ ನೆನಪು ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತಿರುವ :

- ಪತ್ನಿ: ಶ್ರೀಮತಿ ಟಿ.ಹೆಚ್.ಎಂ. ಜಯಶ್ರೀ
- ಪುತ್ರ : ಶ್ರೀ ಟಿ.ಹೆಚ್.ಎಂ. ವಿನಯ್, ಸೊಸೆ : ಶ್ರೀಮತಿ ಚೇತನ ವಿನಯ್ ಹಾಗೂ ಮಕ್ಕಳು : ತನ್ವಿ, ದಿವಿತ್, ದಾವಣಗೆರೆ.
- ಪುತ್ರ : ಶ್ರೀ ಟಿ.ಹೆಚ್.ಎಂ. ವಿವೇಕ್, ಸೊಸೆ : ಶ್ರೀಮತಿ ಸೌಜನ್ಯ ವಿವೇಕ್, ದಾವಣಗೆರೆ.
- ಶ್ರೀಮತಿ ನಾಗರತ್ನ ಲಿಂ. ಶ್ರೀ ಗಂಗಾಧರಪ್ಪ ಎನ್.ಎಂ. ಮತ್ತು ಕುಟುಂಬದವರು, ಬೆಂಗಳೂರು.
- ಶ್ರೀಮತಿ ಶ್ರೀ ಶೋಭ ವೀರಭದ್ರಪ್ಪ ಮತ್ತು ಕುಟುಂಬದವರು, ಜಗಳೂರು.
- ಶ್ರೀಮತಿ ಚೆನ್ನಮ್ಮ ಲಿಂ. ವೇ. ಶ್ರೀ ಮಹಾಲಿಂಗಸ್ವಾಮಿ ಟಿ.ಹೆಚ್.ಎಂ. ಮತ್ತು ಕುಟುಂಬದವರು, ದಾವಣಗೆರೆ.
- ಲಿಂ. ಶ್ರೀಮತಿ ಶ್ರೀ ಟಿ.ಎಸ್. ಅಂಬಿಕಾದೇವಿ ಸಿದ್ದಲಿಂಗ ಆರಾಧ್ಯ ಮತ್ತು ಕುಟುಂಬದವರು, ಬೆಂಗಳೂರು.
- ಶ್ರೀಮತಿ ಶ್ರೀ ಎಸ್. ಗಿರಿಜಮ್ಮ ಚನ್ನಯ್ಯ ಮತ್ತು ಕುಟುಂಬದವರು, ಬೆಂಗಳೂರು.
- ಶ್ರೀಮತಿ ಎಸ್. ಸುನಂದಾ ಲಿಂ.ವೇ. ಶ್ರೀ ಬಸವರಾಜಯ್ಯ ಮತ್ತು ಕುಟುಂಬದವರು, ದಾವಣಗೆರೆ.
- ಶ್ರೀಮತಿ ಐ.ಎಂ. ಶಾಂತಮ್ಮ ಲಿಂ. ವೇ. ಶ್ರೀ ಮೃತ್ಯುಂಜಯ ಸ್ವಾಮಿ ಮತ್ತು ಕುಟುಂಬದವರು, ಭೈರೇಕೊಪ್ಪ
- ಶ್ರೀಮತಿ ಶ್ರೀ ಟಿ.ಎಸ್. ವಿಜಯ ನಟರಾಜ್ ಆರಾಧ್ಯ ಮತ್ತು ಕುಟುಂಬದವರು, ತುಮಕೂರು.
- ಟಿ.ಹೆಚ್.ಎಂ. ವಂಶಸ್ಥರು ಹಾಗೂ ಬಂಧು-ಮಿತ್ರರು

## ವಾರ ಭವಿಷ್ಯ

**ದಿನಾಂಕ : 12.06.2022 ರಿಂದ 18.06.2022**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬಹಳಕಾಲದಿಂದ ಸರ್ಕಾರದ ವಿರುದ್ಧ ಕಾನೂನಾತ್ಮಕವಾದ ಹೋರಾಟಕ್ಕೆ ತಾತ್ವಿಕ ಜಯ ಸಿಗಲಿದೆ. ಬಹಳ ಕಾಲದಿಂದ ನಿರೀಕ್ಷೆಯಲ್ಲಿದ್ದ ಶುಭ ಸಮಾಚಾರವೊಂದು ಕೇಳಿಬರಲಿದೆ. ಹಣಕಾಸಿನ ಹರಿವೂ ಕೂಡ ಚೆನ್ನಾಗಿಯೇ ಇರುವುದರಿಂದ ಆರ್ಥಿಕ ತೊಂದರೆ ಇರುವುದಿಲ್ಲ. ಯತ್ನಿಸಿದ ಕಾರ್ಯಗಳೆಲ್ಲವೂ ಸುಸೂತ್ರವಾಗಿ ನೆರವೇರಲಿವೆ. ಮಗಳ ಅಥವಾ ಮಗನ ಮದುವೆ ಮುಂದೂಡುವುದು ಲೇಸು. ನಿಮ್ಮ ಸಾಹಸಪ್ರಿಯತೆಯನ್ನು ಎಲ್ಲರೂ ಮೆಚ್ಚುವರು. ಹಲವು ವಿಷಯಗಳಲ್ಲಿ ಅನಾವಶ್ಯಕವಾಗಿ ಹಿರಿಯರೊಂದಿಗೆ ವಾಗ್ವಾದ ಮಾಡಲೇಬೇಡಿ. ವಿದ್ಯಾರ್ಥಿಗಳಿಗೆ ಮತ್ತು ಮಹಿಳೆಯರಿಗೆ ಉತ್ತಮ ದಿನಗಳು, ಅವಕಾಶ ಸಿಕ್ಕಲ್ಲಿ ಅನ್ನದಾನ ಮಾಡಿರಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸಾಮಾಜಿಕ ಹೋರಾಟ ಅಥವಾ ಇನ್ಯಾವುದೇ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಬಹುದು. ಸ್ನೇಹಿತರೊಂದಿಗೆ ಮಾಡುವ ಮಾತಿನ ಚಕಮಕಿ, ವಿಕೋಪಕ್ಕೆ ಹೋಗದಂತೆ ನೋಡಿಕೊಳ್ಳಿ. ಬಹುದಿನಗಳಿಂದ ಸ್ವಂತ ಉದ್ಯಮ ಆರಂಭಿಸಬೇಕೆಂಬ ನಿಮ್ಮ ಬಯಕೆಗೆ, ಹಣಕಾಸಿನ ಸಂಸ್ಥೆಗಳು ನೆರವು ನೀಡಲಿವೆ. ಎಷ್ಟೇ ಕೆಲಸ, ಕಾರ್ಯಗಳ ಒತ್ತಡವಿದ್ದರೂ ಕೌಟುಂಬಿಕ ವಿಷಯಗಳನ್ನು ಅಲಕ್ಷಿಸಬೇಡಿ. ಪರಮಾಪ್ತರ ಅಗಲಿಕೆ ನಿಮ್ಮನ್ನು ಚಿಂತೆಗೀಡು ಮಾಡಲಿದೆ. ಸಂಗೀತಗಾರರಿಗೆ ಹಾಗೂ ಸಿನಿಮಾ ನಟರಿಗೆ, ಉತ್ತಮ ಅವಕಾಶಗಳು. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಹದಗೆಡುತ್ತಿರುವ ಆರೋಗ್ಯಕ್ಕೆ ಮಿತಾಹಾರವೇ ಒಳ್ಳೆಯ ಮದ್ದು. ಸಂಶೋಧನಾ ರಂಗದಲ್ಲಿ ಕೆಲಸ ಮಾಡುತ್ತಿರುವವರು, ಇಡೀ ದೇಶವೇ ಹೆಮ್ಮೆಪಡುವಂತಹ ಕೆಲಸ ಮಾಡಲಿದ್ದಾರೆ. ಪ್ರತಿಯೊಂದಕ್ಕೂ ಕಾನೂನಾತ್ಮಕ ಹೋರಾಟವೊಂದೇ ಪರಿಹಾರವಲ್ಲ. ಈ ಹಿಂದೆ ನಿಂತು ಹೋಗಿದ್ದ ಮಗನ ಮದುವೆ ಮಾತುಕತೆ ಮತ್ತೆ ಮುನ್ನೆಲೆಗೆ ಬರಲಿದೆ.ಆಸ್ತಿ ವಿಭಾಗ ವಿಚಾರವನ್ನು ಕೆಲಕಾಲ ಮುಂದೂಡಿರಿ. ಅರಿವಿಲ್ಲದ ವ್ಯವಹಾರ ಗಳನ್ನು ಮಾಡಲು ಹೋಗಿ ಮಹಿಳೆಯರು ತಾವು ಮಾತ್ರವಲ್ಲದೇ ಮನೆಯ ಜನರನ್ನೆಲ್ಲಾ, ಚಿಂತೆಗೀಡುಮಾಡುವರು. ಇದರಿಂದಾಗಿ ಅವರ ರಾಜಕೀಯಭವಿಷ್ಯ ಮಸುಕಾಗಲಿದೆ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಕೈಗಾರಿಕೋದ್ಯಮಿಗಳು ಯಂತ್ರೋಪಕರಣಗಳ ಖರೀದಿಗೆಂದು ಹೆಚ್ಚು ವೆಚ್ಚ, ಬೆಂಕಿ ಅಥವಾ ವಿದ್ಯುತ್ ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರು ಸಾಕಷ್ಟು ಎಚ್ಚರದಿಂದಿರಿ, ಚಾಡಿ ಮಾತನ್ನು ಕೇಳಿ, ಕುಟುಂಬದ ನೆಮ್ಮದಿಯನ್ನು ಹಾಳುಮಾಡಿ ಕೊಳ್ಳಬೇಡಿ. ಆದಾಯದ ಮೂಲದಲ್ಲಿ ಹೆಚ್ಚಳ ವಿಲ್ಲದೇ ಇರುವುದರಿಂದ ಖರ್ಚು-ವೆಚ್ಚಗಳಿ ಗೊಂದು ಕಡಿವಾಣವಿರಲಿ, ಅನನುಭವಿಗಳೊಂದಿಗೆ ವ್ಯವಹರಿಸುವುದರಿಂದ ಲಾಭಕ್ಕಿಂತ ನಷ್ಟವೇ ಬಹಳ. ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ಬರಲಿದ್ದು, ಹಳೇ ಸಾಲಗಳನ್ನು ಮರು ಪಾವತಿ ಮಾಡಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಸೋಮ-ಬುಧ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಯಾವುದೇ ಕೆಲಸ ಮಾಡುವ ಮೊದಲು ಅದರ ಅಗಲ ಮತ್ತು ಆಳದ ಅರಿವಿರುವುದು ಉತ್ತಮ, ಇಲ್ಲವಾದಲ್ಲಿ ನಷ್ಟ ಕಟ್ಟಿಟ್ಟ ಬುತ್ತಿ. ಖಾಸಗಿ ಕಂಪನಿ ನೌಕರರಿಗೆ ಉದ್ಯೋಗ ಬದಲಿಸಲು ಇದು ಸಕಾಲ. ಹೊಸ ವ್ಯವಹಾರಗಳನ್ನು ಆರಂಭಿಸುವ ಮೊದಲು ಅನುಭವಿಗಳಾದ ಹಿರಿಯರೊಂದಿಗೆ ಚರ್ಚಿಸಿ, ಆದಾಯ ಉತ್ತಮವಾಗಿರುವುದರಿಂದ, ಆರ್ಥಿಕ ತೊಂದರೆ ಇಲ್ಲ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನಕ್ಕೆ ತಕ್ಕ ಫಲಿತಾಂಶ, ಅನಿರೀಕ್ಷಿತವಾಗಿ ಬೆನ್ನು ನೋವು ಹೆಚ್ಚಾಗಲಿದ್ದು ಉದಾಸೀನ ಮಾಡದೇ ಸೂಕ್ತ ಚಿಕಿತ್ಸೆ ಪಡೆಯಿರಿ. ಲೇವಾದೇವಿ ವ್ಯವಹಾರ ಸದ್ಯದ ಪರಿಸ್ಥಿತಿಯಲ್ಲಿ ಲಾಭದಾಯಕವಲ್ಲ. ಮಾಹಾಲಕ್ಷ್ಮಿಯನ್ನು ವಿಶೇಷವಾಗಿ ಆರಾಧಿಸಿ. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನವದಂಪತಿಗಳ ಮಧ್ಯೆ ಮೂಡಿದ್ದ ಭಿನ್ನಾಭಿಪ್ರಾಯ ಹಿರಿಯರ ಮಧ್ಯಸ್ಥಿಕೆಯಿಂದ ದೂರವಾಗಲಿದೆ. ಐಟಿ, ಬಿಟಿ, ಕಂಪನಿಗಳ ನೌಕರರಿಗೆ ಕೆಲಸಗಳಲ್ಲಿ ಒತ್ತಡ. ಜೊತೆಗೆ ಕಂಪನಿ ಮೂಲಕ ವಿದೇಶಕ್ಕೆ ಹೋಗಿಬರುವ ಅವಕಾಶ ಸಿಗಲಿದೆ. ಹಣದ ಹರಿವು ಹೆಚ್ಚಾಗಲಿದ್ದು, ಉಳಿತಾಯದ ಬಗ್ಗೆ ಯೋಚಿಸುವುದು ಉತ್ತಮ. ಖಾಸಗಿ ಕಂಪನಿಯಲ್ಲಿರುವ ಮಗನ ವೇತನದಲ್ಲಿ ಹೆಚ್ಚಳವಾದರೂ, ಅದರಿಂದ ನಿಮಗೇನೂ ಪ್ರಯೋಜನವಿಲ್ಲ. ಗುರುತು ಪರಿಚಯವಿಲ್ಲದ ನದಿ, ಕೆರೆಗಳಲ್ಲಿ ಯುವಕರು ಈಜಲು ಹೋಗದಿರುವುದು ಉತ್ತಮ. ಮಧುಮೇಹ, ರಕ್ತದೊತ್ತಡ ಮೊದಲಾದ ಕಾಯಿಲೆಯಿಂದ ಬಳಲುತ್ತಿರುವವರು ಎಚ್ಚರದಿಂದಿರುವುದು ಮೇಲು. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸದ್ಯದ ಪರಿಸ್ಥಿತಿಯಲ್ಲಿ ದಿನಗಳು ಅಷ್ಟು ಅನುಕೂಲಕವಾಗಿಲ್ಲದಿರುವುದರಿಂದ,ಗೆಳೆಯರ ಸಲಹೆ ಸೂಚನೆಗಳನ್ನು ಅನುಸರಿಸಿ, ವ್ಯವಹಾರದಲ್ಲಿ ಮುನ್ನಡೆಯು ವುದು ಮೇಲು.ಮಕ್ಕಳವಿದ್ಯಾಭ್ಯಾಸಕ್ಕೆ ಹೆಚ್ಚಿನ ವೆಚ್ಚ,ಅನಿವಾರ್ಯವಾಗಲಿದೆ. ಮತ್ತೊಬ್ಬರ ಸಮಸ್ಯೆಗಳನ್ನು ಪರಿಹರಿಸಲು ಹೋಗಿ,ನೀವೇ ಸಮಸ್ಯೆಯ ಸುಳಿಯಲ್ಲಿ ಸಿಲುಕಬಹುದು. ಅತಿಥಿಗಳ ನಿರಂತರಾಗಮನ ಸಂತೋಷದಾಯಕವಾದರೂ,ಮನೆಯ ವೆಚ್ಚಹೆಚ್ಚಾಗಲಿದೆ. ಹಿರಿಯರ ಆರೋಗ್ಯದಲ್ಲುಂಟಾದ ಏರುಪೇರಿಗೆ, ವೈದ್ಯಕೀಯ ಚಿಕಿತ್ಸೆ ಅನಿವಾರ್ಯವಾಗಲಿದೆ, ಮತ್ತು ಇದಕ್ಕಾಗಿ ಉಳಿತಾಯದ ಗಂಟು ತುಸು ಕರಗಲಿದೆ. ಯುವಕರು ತಮ್ಮ ಪಾಲಕರೊಂದಿಗೆ ಮುಕ್ತವಾಗಿ ಅಭಿಪ್ರಾಯವನ್ನು ಹಂಚಿಕೊಳ್ಳುವುದು ಮೇಲು, ದಕ್ಷಿಣಾಮೂರ್ತಿ ಆರಾಧನೆ ಮಾಡಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಆದಾಯಕ್ಕೆ ಹಲವಾರು ಮಾರ್ಗಗಳಿರುವಂತೆ, ಖರ್ಚಿಗೂ ಅದರ ದುಪ್ಪಟ್ಟು ಮಾರ್ಗವಿರುವುದರಿಂದ ಸಂಪಾದನೆ ಎಷ್ಟೇ ಇದ್ದರೂ, ಸಾಲದೇ ಹೋಗ ಬಹುದು. ಉಳಿತಾಯದ ಮಾತಂತೂ ಇಲ್ಲವೆಂದೇ ಹೇಳಬಹುದು. ಯುವಕರು ಹೊಸ ಉದ್ಯಮದಲ್ಲಿ ತೊಡಗುವ ಮೊದಲು, ಅದರ ಬಗ್ಗೆ ಚಿಂತನೆ ಮಾಡುವುದು ಉತ್ತಮ. ಇಲ್ಲವಾದಲ್ಲಿ ಸಾಲದ ಸುಳಿಯಲ್ಲಿ ಸಿಲುಕಬಹುದು. ಊಸರವಳ್ಳಿಯಂತೆ ಬದಲಾಗುವ ನಿಮ್ಮ ಗುಣ ಸ್ವಭಾವ ಸ್ನೇಹಕ್ಕೆ ಅಡ್ಡಿಯನ್ನುಂಟು ಮಾಡಬಹುದು. ಯಾರು ಏನೇ ಹೇಳಿದರೂ, ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ, ಅಂತಿಮ ನಿರ್ಧಾರ ನಿಮ್ಮದೇ ಆಗಿರಲಿ. ಕೆಲವು ವಿಚಾರಗಳು ಕಾಲಾಂತರದಲ್ಲಿ ನಿಮಗುಂಟಾಗಲಿರುವ ಅನುಭವದಿಂದ ತಿಳಿಯುವಿರಿ.ಗುರುಗಳನ್ನು ಆರಾಧಿಸಿ. ಮಂಗಳ-ಗುರು-ಶುಕ್ರ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿಮ್ಮ ಬದುಕಿನಲ್ಲಿ ಅನಿರೀಕ್ಷಿತವಾಗಿ ಉಂಟಾಗಲಿರುವ ಬದಲಾವಣೆಗೆ, ಮಾನಸಿಕವಾಗಿ ಈಗಲೇ ಸಿದ್ಧರಾಗಿರುವುದು ಮೇಲು. ಬದಲಾವಣೆ ಬದುಕಿನ ಒಂದು ಅಂಗ ಎಂಬುದು ನೆನಪಿರಲಿ. ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ವೇತನದಲ್ಲಿ ಹೆಚ್ಚಳ, ಮಗನಿಗಾಗಿ ವೈದ್ಯಕೀಯ ವೆಚ್ಚ, ಹಣಕಾಸಿನ ವಿಚಾರದಲ್ಲಿ ಪ್ರಾಮಾಣಿಕತೆ ಇರಲಿ. ಅಂಕೆ ಮೀರಿದ ಖರ್ಚು ವೆಚ್ಚಗಳು ಹೊಸ ಸಾಲಕ್ಕೆ ಕಾರಣವಾಗಲಿವೆ. ರಾಜಕಾರಣಿಗಳು ಸದ್ಯದ ಪರಿಸ್ಥಿತಿಯಲ್ಲಿ ವಿರುದ್ಧ ಅಥವಾ ಗೊಂದಲಮಯವಾದ ಹೇಳಿಕೆ ಕೊಡುವುದರಿಂದ, ಪಕ್ಷದ ವರ್ಚಸ್ಸಿಗೆ ಧಕ್ಕೆಯುಂಟಾಗಬಹುದು. ಸೋಮ-ಬುಧ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಅನಿರೀಕ್ಷಿತವಾಗಿ ಹೆಚ್ಚಿದ ಕೆಲಸ, ಕಾರ್ಯಗಳ ಒತ್ತಡದಿಂದ ವಿಶ್ರಾಂತಿ ಇಲ್ಲದೇ ಹೋಗಬಹುದು. ಇದರ ಪರಿಣಾಮವೆಂಬಂತೆ ಮನೆಯಲ್ಲಿರುವ ಸದಸ್ಯರೊಂದಿಗೆ ಸಿಡಿಮಿಡಿ ಮಾಡುವಿರಿ, ಮಾನಸಿಕ ನೆಮ್ಮದಿಗೆ ಯೋಗಾಭ್ಯಾಸದ ಮೊರೆ ಹೋಗುವುದು ಮೇಲು. ಕಾಲಕಾಲಕ್ಕೆ ವಿಶ್ರಾಂತಿ ಪಡೆಯುವುದೂ ಉತ್ತಮ. ಆರ್ಥಿಕ ಪರಿಸ್ಥಿತಿ ಉತ್ತಮ ವಾಗಿಯೇ ಇರುವುದರಿಂದ, ದೈನಂದಿನ ನಿರ್ವಹಣೆಗೇನೂ ತೊಂದರೆಯಿಲ್ಲ. ಮಕ್ಕಳ ವರ್ತನೆಯಲ್ಲುಂಟಾಗಲಿರುವ ಬದಲಾವಣೆ ಚಿಂತೆಗೀಡು ಮಾಡಲಿದೆ. ಸದ್ಯದ ಮಟ್ಟಿಗೆ, ಯಾವುದೇ ವ್ಯವಹಾರಬೇಡ, ಅವಕಾಶವಿದ್ದಲ್ಲಿ ಬಡವಿದ್ಯಾರ್ಥಿಗಳಿಗೆ ನೆರವಾಗಿ, ದುರ್ಗಾಪರಮೇಶ್ವರಿ ಆರಾಧಿಸಿ. ಭಾನು-ಗುರು-ಶನಿ-ಶುಭ ದಿನಗಳು.


**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನಿಮ್ಮ ಕೈಕೆಳಗಿನ ನೌಕರರು ಎಷ್ಟೇ ಪ್ರಾಮಾಣಿಕವಾಗಿ ಕಡತಗಳನ್ನು ನಿರ್ವಹಿಸಿದ್ದರೂ, ಅದನ್ನು ಮತ್ತೊಮ್ಮೆ ಅವಲೋಕಿಸುವುದು ಮೇಲು. ವಿಸ್ತರಿಸಿದ ವ್ಯವಹಾರದ ನಿರ್ವಹಣೆಗೆ ಉಂಟಾದ ಹಣಕಾಸಿನ ಕೊರತೆಯಿಂದಾಗಿ ಹೊಸ ಪಾಲುದಾರರನ್ನು ಹುಡುಕುವಿರಿ. ಕೆಲವು ವಿಷಯಗಳನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿರಿ. ಮನೆಯಲ್ಲಿ, ಹಿರಿಯರ ಕೋರಿಕೆಗಳನ್ನು ನೆರವೇರಿಸಲು ಪ್ರಯತ್ನಿಸುವಿರಿ. ಪೂರ್ವನಿರ್ಧರಿತ ಮಂಗಳ ಕಾರ್ಯಗಳ ಸಿದ್ಧತೆ ಜೋರಾಗಿಯೇ ನಡೆಯಲಿದೆ. ಅದಕ್ಕೆ ನಿಮ್ಮಿಂದ ಹೆಚ್ಚಿನ ದೇಣಿಗೆ ಸಂದಲಿದೆ. ತಾಂತ್ರಿಕ ಕ್ಷೇತ್ರದಲ್ಲಿರುವವರು, ನೌಕರಿ ಬದಲಾವಣೆಗೆ ಯತ್ನಿಸುವುದು ಅಪಾಯವನ್ನು ಆಹ್ವಾನಿಸಿದಂತೆಯೇ ಸರಿ. ಆರೋಗ್ಯದ ಕಡೆ ಗಮನವಿರಲಿ. ಗಣೇಶನನ್ನು ಆರಾಧಿಸಿ. ಸೋಮ-ಮಂಗಳ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕಷ್ಟದಲ್ಲಿರುವ ಗೆಳೆಯರಿಗೆ ಸಾಂತ್ವನದ ಮಾತುಗಳೊಂದಿಗೆ, ಭರವಸೆ ಮಾತುಗಳನ್ನಾಡುವಿರಿ, ಹಣಕಾಸಿನ ವಿಚಾರದಲ್ಲಿ ಸಾಧ್ಯವಾದಷ್ಟು ಬಿಗಿ ನಿಲುವನ್ನು ತಾಳು ವುದು ಮೇಲು. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಮತ್ತೊಬ್ಬರು ಮಾಡುತ್ತಾರೆಂದು ನಿಮ್ಮ ಕರ್ತವ್ಯವನ್ನು ಮರೆಯುವುದು ತರವಲ್ಲ. ಯುವಕರು ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ, ಕೌಟುಂಬಿಕ ಸಮಸ್ಯೆಗಳು ಏನೇ ಇದ್ದರೂ ನಿಭಾಯಿಸಲು ಸಾಧ್ಯ. ಅಮೂಲ್ಯ ವಸ್ತುಗಳ ನ್ನಾಗಲೀ ಅಥವಾ ದಾಖಲೆಗಳನ್ನಾಗಲಿ ಜೋಪಾನವಾಗಿ ಕಾಪಾಡಿಕೊಳ್ಳಿ. ಹಿರಿಯರ ಮಾರ್ಗ ದರ್ಶನ ಅತ್ಯಾವಶ್ಯಕ. ಹಣಕಾಸಿನ ಪರಿಸ್ಥಿತಿ ಸಾಧಾರಣ, ಕುಲದೇವತಾ ದರ್ಶನ ಮಾಡಿರಿ. ಭಾನು-ಸೋಮ-ಗುರು-ಶುಭ ದಿನಗಳು.

# ಹರಿಹರದ ಹುಲಿ ಹೆಚ್. ಸಿದ್ದವೀರಪ್ಪ : 116 ವರ್ಷದ ಸ್ಮರಣೆ



**ಸೋಲನ್ನು ಸವಾಲಾಗಿ ಸ್ವೀಕರಿಸಿ ಹುಟ್ಟೂರು ಹನಗವಾಡಿಗೆ ವಾಪಸಾಗಿ ವ್ಯವಸಾಯ ಮಾಡಿಕೊಂಡು, ಊರಿನ ಸ್ವಂತ ಜಮೀನಿನಲ್ಲಿ ಶೇಂಗಾ, ಹತ್ತಿ, ಜೋಳ ಬೆಳೆದರು. ವಕೀಲ ವೃತ್ತಿ ಮುಂದುವರಿಸಿ ರೈತರ ಸಂಘಟನೆಯಲ್ಲಿ ತೊಡಗಿದರು. ಸ್ಥಳೀಯ ರಾಜಕಾರಣದಿಂದಾಗಿ ಕಾಂಗ್ರೆಸ್ ಒಂದು ದಶಕ ಕಾಲ ಸಿದ್ದವೀರಪ್ಪ ಅವರಿಗೆ ಟಿಕೆಟ್ ನಿರಾಕರಿಸಿತು !**

ಈಗಿನ ಪೀಳಿಗೆಗೆ ಮರೆತಿರುವ ಏಕೀಕೃತ ಕರ್ನಾಟಕದ ಮೊದಲ ಮೂರು ದಶಕಗಳ ಮಹತ್ವದ ದಿಟ್ಟ ರಾಜಕಾರಣಿ ಎಚ್. ಸಿದ್ದವೀರಪ್ಪ (ಹನಗವಾಡಿ -ಹರಿಹರ) ಅವರು ಹುಟ್ಟಿ ಇಂದಿಗೆ ನೂರಾ ಹದಿನಾರು ವರ್ಷ.

ಐವತ್ತರ ದಶಕದಿಂದ ಎಂಬತ್ತರ ದಶಕದವರೆಗೆ ರಾಜ್ಯ ರಾಜಕೀಯದಲ್ಲಿ ಪ್ರಭಾವಿ ಪಾತ್ರ ವಹಿಸಿದ್ದ ಸಂಸದೀಯ ಪಟು ಎಚ್. ಸಿದ್ದವೀರಪ್ಪ ಅವರು, ಮೂರು ದಶಕಗಳ ರಾಜಕೀಯ ಜೀವನದಲ್ಲಿ ಅನೇಕ ಏರುಪೇರುಗಳನ್ನು ಕಂಡವರು. ಸ್ವಾತಂತ್ರ್ಯಾ ನಂತರ ಕರ್ನಾಟಕ ಏಕೀಕರಣದ ಕನಸು ಕಂಡವರಲ್ಲಿ ಪ್ರಮುಖರು. ಕೃಷಿ, ಕೈಗಾರಿಕೆ, ಗೃಹ, ಆರೋಗ್ಯ ಖಾತೆಗಳ ಸಚಿವರಾಗಿ ಬಹು ದಕ್ಷ ಹಾಗೂ ಪ್ರಾಮಾಣಿಕ ರಾಜಕಾರಣಿ ಅನ್ನಿಸಿಕೊಂಡವರು.

ರಾಜ್ಯ ಭೂಪಟದ ಮಧ್ಯಭಾಗ ದಾವಣಗೆರೆ - ಹರಿಹರ ಇವರ ಕಾರ್ಯ ಚಟುವಟಿಕೆಯ ಕೇಂದ್ರಸ್ಥಾನ. ತೀರಾ ಬಡತನದಿಂದ ಮೇಲೆ ಬಂದವರು. 1906, ಜೂನ್ 12ರಂದು ಹರಿಹರ ತಾಲ್ಲೂಕು ಹನಗವಾಡಿಯಲ್ಲಿ ಇವರ ಜನನ. ಇವರು ಹುಟ್ಟಿ 2022 ಜೂನ್ 12ಕ್ಕೆ 116 ವರ್ಷವಾಗುತ್ತದೆ.

ತಂದೆ ಗುರುಸಿದ್ದಪ್ಪ ಸಣ್ಣ ವ್ಯವಸಾಯಗಾರರು. ಎಮ್ಮೆ ಕಾದು ಮಗನನ್ನು ಓದಿಸುವಾಗ ಐದಾರು ರುಪಾಯಿ ಕೊಡಲೂ ಕಷ್ಟ ಇದ್ದ ದಿನಗಳವು. ಇದರಿಂದ ಹುಡುಗ ಸಿದ್ದವೀರಪ್ಪನ ವಿದ್ಯಾಭ್ಯಾಸ ನಡು ನಡುವೆ ಕುಂಠಿತವಾಗುತ್ತಿತ್ತು.

ಮನೆಯ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದಿದ್ದರೂ ಓದಿನಲ್ಲಿ ಮುಂದಿದ್ದ ಸಿದ್ದವೀರಪ್ಪ ಹುಟ್ಟೂರಿನಲ್ಲಿ ಶಾಲಾ ಕಟ್ಟಡ ಕಾಣದೆ ಪ್ರಾಥಮಿಕ ಓದು ಮುಗಿಸಿ, ಮಾಧ್ಯಮಿಕ ಶಿಕ್ಷಣಕ್ಕೆ ದಾವಣಗೆರೆಗೆ ಬಂದರು. ಮತ್ತೆ ಅಲ್ಲಿ 7ನೇ ತರಗತಿ ಓದಿಗೆ ತೊಡಕಾಯಿತು. ಹುಡುಗ ನಿರಾಶನಾಗಿ ಮನೆಗೆ ವಾಪಾಸ್ ಬಂದ. ಎರಡು ವರ್ಷ ಎಮ್ಮೆ ಕಾದ. ಹೊಲದಿಂದ ಹುಲ್ಲು ತಂದು ಮೇಯಿಸಿದ. ಬಡತನದ ಕಾರಣ ಓದು ಮುಂದುವರೆಯಲಿಲ್ಲ.

ಬಾಲಕ ಸಿದ್ದವೀರಪ್ಪನ ಓದುವ ವ್ಯವಸ್ಥೆಯನ್ನು ಮುಂದೆ ದೊಡ್ಡಬಾತಿಯ ಅವರ ಸಂಬಂಧಿ ನೋಡಿಕೊಂಡರು. ಹೈಸ್ಕೂಲ್ ಶಿಕ್ಷಣದ ಖರ್ಚನ್ನೂ ಅವರೇ ಭರಿಸಿದರು. ಮುಂದೆ ಕಾಲೇಜು ಶಿಕ್ಷಣಕ್ಕೆ ಮೈಸೂರು ಮಹಾರಾಜ ಕಾಲೇಜು ಸೇರಿ, ವಿದ್ಯಾರ್ಥಿ ಸಂಘಟನೆಯಲ್ಲಿ ಭಾಗವಹಿಸಿ ಒಳ್ಳೆ ಭಾಷಣಕಾರರಾದರು.

**ಕಾನೂನು ಓದಲು ಮದುವೆ ! :** ಬಿ.ಎ. ಪದವಿ ಶಿಕ್ಷಣ ಮುಗಿದ ನಂತರ ಕಾನೂನು (ಆಗಿನ ಬಿ.ಎಲ್.) ಓದುವ ಅಭಿಲಾಷೆ ಇದ್ದರೂ ಮನೆಯ ಆರ್ಥಿಕ ಸ್ಥಿತಿ ಕಣ್ಣೆದುರು ಬಂತು. ಮದುವೆ ಆದರೆ ಹೆಣ್ಣಿನ ಕಡೆಯವರೇ ಓದಿನ ಖರ್ಚು ನೋಡಿಕೊಳ್ಳುತ್ತಾರೆ ಎಂದು ಬಂಧುವೊಬ್ಬರ ಸಲಹೆಗೆ ಒಪ್ಪಿದರು. ಹರಿಹರ ಬಳಿಯ ದೊಡ್ಡಬಾತಿಯ ಮಹಾದೇವಮ್ಮ ಎಂಬುವರನ್ನು ಮದುವೆ ಆದರು. ಪೂನಾದ ಫರ್ಗ್ಯುಸನ್ ಕಾಲೇಜಿನಲ್ಲಿ ಕಾನೂನು ಶಿಕ್ಷಣ ಪಡೆದು ವಾಪಸಾಗಿ ದಾವಣಗೆರೆಯ ಗಡಿಯಾರ ಕಂಬದ ಬಳಿ 'ಅಡ್ವೋಕೇಟ್' ಎಂದು ಬೋರ್ಡು ಹಾಕಿದರು.

ದಾವಣಗೆರೆ - ಹರಿಹರ, ಸುತ್ತಮುತ್ತಲ ಹಳ್ಳಿ, ತಾಲ್ಲೂಕುಗಳಲ್ಲಿ ಇವರ ಹೆಸರು ಓಡಾಡಿತು. ಜಿಲ್ಲಾ ಕೋರ್ಟ್ ಚಿತ್ರದುರ್ಗದಲ್ಲಿದ್ದುದರಿಂದ ಅಲ್ಲಿಗೆ ಓಡಾಡಿದರು. ಸಿವಿಲ್ ಕೇಸುಗಳಿಗಿಂತ 'ಕ್ರಿಮಿನಲ್ ಕೇಸುಗಳಲ್ಲಿ ಯಶಸ್ವಿಯಾದರು. ಇದೇ ಸಂದರ್ಭದಲ್ಲಿ ರೈತರ ಸಮಸ್ಯೆಗಳ ಕಡೆ ಗಮನಹರಿಸಿ, ಅನೇಕ ಉಪಯುಕ್ತ ಕೆಲಸ ಮಾಡಿದರು. ರೆಗ್ಯುಲೇಟೆಡ್ ಮಾರ್ಕೆಟ್, ರೈತರಿಗಾಗಿ ವಿಶ್ರಾಂತಿ ಗೃಹ ನಿರ್ಮಾಣಕ್ಕೂ ಶ್ರಮಿಸಿದರು. ದಲ್ಲಾಳಿಗಳಿಂದ ರೈತರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲು ಬೀದಿಗಿಳಿದರು. ಮಾರಾಟ ಮಾಡಿದ ದವಸ ಧಾನ್ಯಕ್ಕೆ ದುಬಾರಿ ಕಮೀಷನ್, ಬಡ್ಡಿ ವಸೂಲಿ ಇತ್ಯಾದಿ ದಲ್ಲಾಳರ ಕಿರುಕುಳ ಕಂಡು 'ರೈತರ ಫಸಲುಗಳ ಮಾರಾಟ ಸಹಕಾರ ಸಂಘ' ಸ್ಥಾಪಿಸಿದರು.

ಇಂದು ರಾಜ್ಯಾದ್ಯಂತ 'ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್'ಗೆ ದೊಡ್ಡ ಹೆಸರು ಬಂದಿದ್ದರೆ ಅದಕ್ಕೆ ಸಿದ್ದವೀರಪ್ಪ ಹಾಕಿದ ಅಡಿಪಾಯವೇ ಕಾರಣ ಎನ್ನುವ ಅಭಿಪ್ರಾಯ ಅಲ್ಲಿನ ರೈತರದ್ದು, ಹಾಗೆಯೇ ಕುಕ್ಕುವಾಡ ಸಕ್ಕರೆ ಕಾರ್ಖಾನೆಗೂ ಅವರು ಶ್ರಮಿಸಿದ್ದರು.

ನೇಗಿಲು, ಕುಳದಪಟ್ಟಿ, ಕುಡ, ಹಳಿಪಟ್ಟಿ - ಇವುಗಳ ಸರಬರಾಜಿನಲ್ಲಾದ ತೊಂದರೆಯಿಂದ ರೈತರು ಸಂಕಷ್ಟಕ್ಕೀಡಾದಾಗ ಭದ್ರಾವತಿ ಕಬ್ಬಿಣ ಕಾರ್ಖಾನೆಯಿಂದ ಇವೆಲ್ಲವನ್ನೂ ತರಿಸಿ ರೈತರಿಗೆ ವಿತರಿಸಿದರು. ರೈತರು, ಜನಸಾಮಾನ್ಯರ ಬದುಕಿಗೆ ಅವಶ್ಯವಾಗಿದ್ದ ದವಸ-ಧಾನ್ಯ ಅಭಾವ ಆದಾಗ ರೈತ ಸಂಘದಿಂದ ವಿತರಿಸುವ ವ್ಯವಸ್ಥೆ ಮಾಡಿದರು.

ಸ್ವಾತಂತ್ರ್ಯಪೂರ್ವ (1946) ದಾವಣಗೆರೆ ತಾಲ್ಲೂಕಿನ ಕೊಡಗನೂರಿನಲ್ಲಿ ಜಿಲ್ಲಾ ಬೋರ್ಡ್ ಹೈಸ್ಕೂಲ್' ಸ್ಥಾಪನೆ ಮಾಡಿದ್ದಲ್ಲದೆ, ಅಲ್ಲಿಗೆ ಓದಲು ಬರುವ ಗ್ರಾಮೀಣ ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯವನ್ನೂ ಕಲ್ಪಿಸಿದರು.

**ರಾಜ್ಯ ರಾಜಕಾರಣಕ್ಕೆ :** ವಕೀಲ ವೃತ್ತಿ ನಡುವೆ ಶಿಕ್ಷಣ, ಸಾಮಾಜಿಕ ಚಟುವಟಿಕೆ, ರೈತಪರ ಹೋರಾಟದಲ್ಲಿ ಭಾಗಿಯಾದ ಸಿದ್ದವೀರಪ್ಪ, ರಾಜ್ಯ ರಾಜಕಾರಣ ಪ್ರವೇಶಿಸಿ 1954ರಲ್ಲಿ ಹರಿಹರ ಕ್ಷೇತ್ರದಿಂದ ಮೊದಲ ಬಾರಿಗೆ ಕಾಂಗ್ರೆಸ್ ಶಾಸಕರಾಗಿ ಆಯ್ಕೆ ಆದರು. ಕೆಂಗಲ್ ಹನುಮಂತಯ್ಯ ಅವರ ಮಂತ್ರಿಮಂಡಲದಲ್ಲಿ ಕೃಷಿ, ಕೈಗಾರಿಕೆ ಸಚಿವರಾಗಿ ಖಾಸಗಿ ಒಡೆತನದಲ್ಲಿದ್ದ ಕೆ.ಜಿ. ಎಫ್. ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ಪ್ರಾಮಾಣಿಕ, ಧೈರ್ಯವಂತ ಸಿದ್ದವೀರಪ್ಪ ನೇರ ನಡೆ ನುಡಿಯವರಾಗಿದ್ದರು. ಇದೇ ಅವರಿಗೆ ಮುಂದಿನ ರಾಜಕೀಯ ಭವಿಷ್ಯಕ್ಕೆ ತೊಡಕಾಯಿತು. ದಾವಣಗೆರೆ - ಹರಿಹರದ ಬಲಾಢ್ಯ ವರ್ತಕರು ಒಂದಾದರು. ಮುಂದಿನ ಚುನಾವಣೆಯಲ್ಲಿ ಮಳಲ್ಕೆರೆ ರಾಮಣ್ಣ ಎಂಬುವರಿಂದ ಸೋಲು ಕಂಡರು.

ಸೋಲನ್ನು ಸವಾಲಾಗಿ ಸ್ವೀಕರಿಸಿ ಹುಟ್ಟೂರು ಹನಗವಾಡಿಗೆ ವಾಪಸ್ಸಾಗಿ ವ್ಯವಸಾಯ ಮಾಡಿಕೊಂಡು, ಊರಿನ ಸ್ವಂತ ಜಮೀನಿನಲ್ಲಿ ಶೇಂಗಾ, ಹತ್ತಿ, ಜೋಳ ಬೆಳೆದರು. ವಕೀಲ ವೃತ್ತಿ ಮುಂದುವರೆಸಿ ರೈತರ ಸಂಘಟನೆಯಲ್ಲಿ ತೊಡಗಿದರು. ಸ್ಥಳೀಯ ರಾಜಕಾರಣದಿಂದಾಗಿ ಕಾಂಗ್ರೆಸ್ ಒಂದು ದಶಕ ಕಾಲ ಸಿದ್ದವೀರಪ್ಪ ಅವರಿಗೆ ಟಿಕೆಟ್ ನಿರಾಕರಿಸಿತು!

1967ರಲ್ಲಿ ರಾಜ್ಯಮಟ್ಟದಲ್ಲಿ ಅಂದೇ ಒಂದು 'ಜನತಾ ಪಕ್ಷ' ಹೆಸರಿನ ಪ್ರಾದೇಶಿಕ ಪಕ್ಷದ ಸ್ಥಾಪಕರಲ್ಲೊಬ್ಬರಾಗಿ, ಆ ಪಾರ್ಟಿಯಿಂದ ಸ್ಪರ್ಧಿಸಿ ಗೆದ್ದರು. ಆಗ ಎಸ್. ನಿಜಲಿಂಗಪ್ಪ ಮುಖ್ಯಮಂತ್ರಿ ಆದರು. ಇವರು ವಿರೋಧ ಪಕ್ಷದ ನಾಯಕರಾದರು. ನಿಜಲಿಂಗಪ್ಪ, ಕೆಲ ದಿನಗಳಲ್ಲೇ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ್ದರಿಂದ, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದರು.

ಕಾಂಗ್ರೆಸ್ ವಿಭಜನೆಯಾಗಿ ಇಂದಿರಾ ಗಾಂಧಿ ನೇತೃತ್ವದ ಪಕ್ಷ ರಾಜ್ಯದಲ್ಲಿ ದೇವರಾಜು ಅರಸು ನಾಯಕತ್ವದಲ್ಲಿ ಸಂಘಟನೆಗೊಂಡಾಗ ಸಿದ್ದವೀರಪ್ಪ ಆ ಪಕ್ಷ ಸೇರಿ ಅದರ ಆಧಾರ ಸ್ತಂಭಗಳಲ್ಲೊಂದೆನಿಸಿದರು. ಒಂದೇ ವರ್ಷದಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದು ರಾಜ್ಯಪಾಲರ ಆಡಳಿತಾವಧಿಯ ಬಳಿಕ ಮತ್ತೆ ಚುನಾವಣೆ ಬಂತು.

ಅಲ್ಲಿಗಾಗಲೇ ಹರಿಹರ ಕ್ಷೇತ್ರ ಜಿದ್ದಾಜಿದ್ದಿಯ ಕ್ಷೇತ್ರವಾಗಿ ಹೆಸರಾಗಿತ್ತು. ಸಿದ್ದವೀರಪ್ಪ - ಗಾಂಜೀ ವೀರಪ್ಪ ಅವರ ನಡುವಿನ ಪೈಪೋಟಿ 'ಹುಲಿ - ಸಿಂಹ' ಗಳ ಹೋರಾಟ ಎಂದೇ ಗುರ್ತಿಸಿಕೊಂಡಿತು. 1971 - 72ರ ಚುನಾವಣೆಯಲ್ಲಿ ಗಾಂಜೀ ವೀರಪ್ಪ ಅವರ ವಿರುದ್ಧ ಸೆಣಸಿ ಗೆದ್ದರು. ಆಗ ದೇವರಾಜ ಅರಸು, ಸಿದ್ದವೀರಪ್ಪ ಅವರ ನಡುವೆ ಮುಖ್ಯಮಂತ್ರಿ ಪಟ್ಟಕ್ಕೆ ಪೈಪೋಟಿ ನಡೆಯಿತು. ದೆಹಲಿಯಿಂದ ಇಂದಿರಾಗಾಂಧಿ ಅರಸು ಮುಖ್ಯಮಂತ್ರಿ' ಎಂದು ಘೋಷಿಸಿದರು. ಸಿದ್ದವೀರಪ್ಪ ಅರಸು ಮಂತ್ರಿ ಮಂಡಲದಲ್ಲಿ ಗೃಹ ಖಾತೆ ವಹಿಸಿಕೊಂಡರು. ಮುಂದೆ ಆರೋಗ್ಯ ಖಾತೆ ಸಚಿವರಾದ ಅವರು ಮಂತ್ರಿಮಂಡಲದಲ್ಲಿ ದಕ್ಷ, ವರ್ಚಸ್ವಿ ಸಚಿವರೆನಿಸಿದರು.

ಅವರ ಕೊನೆಯ ದಿನಗಳಲ್ಲಿ ಅವರ ಒಬ್ಬನೇ ಮಗ ವೈದ್ಯರಾಗಿ ಅಮೆರಿಕದಲ್ಲಿದ್ದರು. ಅವರು ಭಾರತಕ್ಕೆ ಬರುವುದು ಕಡಿಮೆ ಆಗಿತ್ತು. ಅವರ ಮಗಳು ಆಶಾ ಬೆಂಗಳೂರಿನ ಜಯನಗರದಲ್ಲಿ ಇದ್ದರು. ಅದು ಸಿದ್ದವೀರಪ್ಪ ಅವರು ಕಟ್ಟಿಸಿದ್ದ ಮನೆ. ಮುಂದೆ ಅವರು ರಾಜಕೀಯದಲ್ಲೂ, ಬದುಕಿನಲ್ಲೂ ಮೂಲೆ ಗುಂಪಾದಂತಿದ್ದರು. ಬರಬರುತ್ತಾ ಅವರ ಆರೋಗ್ಯವೂ ಹದಗೆಟ್ಟಿತ್ತು. ಕೊನೆಯ ಕಾಲದಲ್ಲಿ ಅವರ ಶುಶ್ರೂಷೆಯನ್ನು ಅವರ ಮೊಮ್ಮಗಳೆ ನೋಡಿಕೊಂಡಳು.

ಸಿದ್ದವೀರಪ್ಪನವರಿಗೆ ದಾವಣಗೆರೆ ಪಿ.ಜೆ. ಬಡಾವಣೆಯಲ್ಲೂ ಒಂದು ಮನೆ ಇತ್ತು. ಅದನ್ನು ಅವರ ಮಗ ಮಾರಾಟ ಮಾಡಿದ್ದರು. ಉತ್ತಮ ಸಂಸದೀಯ ಪಟು, ಅತ್ಯುತ್ತಮ ವಾಗ್ಮಿ, ಪ್ರಾಮಾಣಿಕ ಆಡಳಿತಗಾರ, ನೇರ ನುಡಿಯ ಎಚ್. ಸಿದ್ದವೀರಪ್ಪ ರಾಜ್ಯ ರಾಜಕಾರಣದಲ್ಲಿ ಅಪರೂಪದವರು.

ಸಿದ್ದವೀರಪ್ಪ ಅವರನ್ನು ಸ್ಮರಿಸಲು ತರಳಬಾಳು ಸಂಸ್ಥೆ ಕಂದಗಲ್ಲಿನಲ್ಲಿ ಎಚ್. ಸಿದ್ದವೀರಪ್ಪ ಹೈಸ್ಕೂಲ್ ಸ್ಥಾಪಿಸಿದೆ. ದಾವಣಗೆರೆಯಲ್ಲಿ ಅವರ ಹೆಸರಿನ ಬಡಾವಣೆ ಇದೆ. ಕುಕ್ಕುವಾಡ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಅವರ ಪ್ರತಿಮೆ ಇದೆ ಎಂದು ಕೇಳಿದ್ದೆ. ಅವರನ್ನು ಮತ್ತೆ ಮತ್ತೆ ಸ್ಮರಿಸುವ ಮಹತ್ವದ ಕೆಲಸಗಳು ಆಗಬೇಕು. ಹಾಗೆಯೇ ಅವರ ಸಮಕಾಲೀನರಾದ ಕೊಂಡಜ್ಜಿ ಬಸಪ್ಪನವರೂ ಸಜ್ಜನ, ಪ್ರಾಮಾಣಿಕರಾಗಿದ್ದನ್ನೂ ನಾನು ಈ ಸಂದರ್ಭ ಸ್ಮರಿಸುತ್ತೇನೆ.

ಈಗ 116 ನೇ ಅವರ ಹುಟ್ಟುಹಬ್ಬದ ಸಂದರ್ಭ ನಾನು ಸ್ಮರಿಸಲು ಕಾರಣವೂ ಇದೆ. ಇಂದಿನ ಪೀಳಿಗೆಯ ಯುವಕರು, ರಾಜಕಾರಣಿಗಳು ಅವರು ಮಾಡಿದ ಒಳ್ಳೆಯ ಕೆಲಸ ನೆನೆಯಲಿ. ಕೊನೆಯ ಪಕ್ಷ ಸಂಸ್ಮರಣೆಯನ್ನಾದರೂ ಮಾಡಲಿ ಎಂಬುದು ನನ್ನ ಉದ್ದೇಶ. ಇವರ ಬಗ್ಗೆ ಕರ್ನಾಟಕ ಸರ್ಕಾರದ ವಿಧಾನಮಂಡಲಕ್ಕೆ 'ಸಂಸದೀಯ ಪಟು ಎಚ್. ಸಿದ್ದವೀರಪ್ಪ' ಎಂಬ ಪುಸ್ತಕ ಬರೆದಿದ್ದೇನೆ.



**- ಆರ್.ಜಿ. ಹಳ್ಳಿ ನಾಗರಾಜ,**
99005 66020

## ತೂಕ ಇಳಿಸಿಕೊಂಡೆ, ಅನುದಾನ ಕೊಡಿ

**ಸಚಿವ ಗಡ್ಕರಿಗೆ ಮಧ್ಯಪ್ರದೇಶ ಸಂಸದನ ಒತ್ತಾಯ**

ಉಜ್ಜೈನ್, ಜೂ. 11 – ಪ್ರತಿ ಕೆ.ಜಿ. ತೂಕ ಇಳಿಕೆಗೆ 1,000 ಕೋಟಿ ರೂ. ಅನುದಾನ ನೀಡುವುದಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ನೀಡಿದ ಭರವಸೆ ಪಾಲಿಸಿರುವ ಲೋಕಸಭಾ ಸದಸ್ಯ ಅನಿಲ್ ಫಿರೋಜಿಯೆ, ನಾನೀಗ 15 ಕೆ.ಜಿ. ತೂಕ ಕಳೆದುಕೊಂಡಿದ್ದೇನೆ ಎಂದಿದ್ದಾರೆ.

ಮಧ್ಯ ಪ್ರದೇಶದ ಉಜ್ಜೈನ್ ಕ್ಷೇತ್ರದ ಸಂಸದರಾಗಿರುವ ಫಿರೋಜಿಯೆ, ಮೊದಲ ಬಾರಿಗೆ ಸದನಕ್ಕೆ ಆಯ್ಕೆಯಾಗಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಮಾತನಾಡಿದ್ದ ಗಡ್ಕರಿ, ಸಂಸದರು ತೂಕ ಇಳಿಸಿಕೊಂಡರೆ ಅನುದಾನ ಬಿಡುಗಡೆ ಮಾಡುವುದಾಗಿ ಹೇಳಿದ್ದರು.

ಈ ಬಗ್ಗೆ ಮಾತನಾಡಿರುವ ಫಿರೋಜಿಯೆ, ಗಡ್ಕರಿ ನಾನು ತೂಕ ಇಳಿಸಿಕೊಳ್ಳಲು ಸ್ಫೂರ್ತಿ ನೀಡಿದ್ದರು. ಆಗ ನನ್ನ ತೂಕ 127 ಕೆ.ಜಿ. ಆಗಿತ್ತು. ನಂತರದ ನಾಲ್ಕು ತಿಂಗಳಲ್ಲಿ 15 ಕೆ.ಜಿ. ತೂಕ ಇಳಿಸಿಕೊಂಡಿದ್ದೇನೆ ಎಂದು ಸಂಸದರು ಹೇಳಿದ್ದಾರೆ.

ಪಥ್ಯ ಹಾಗೂ ಕಸರತ್ತಿನ ಮೂಲಕ ಈ ಸಾಧನೆ ಮಾಡಿದ್ದೇನೆ. 15 ಕೆ.ಜಿ. ತೂಕ ಇಳಿಸಿಕೊಂಡಿರುವುದರಿಂದ, ನನ್ನ ಕ್ಷೇತ್ರಕ್ಕೆ 15,000 ಕೋಟಿ ರೂ. ಅನುದಾನ ನೀಡಬೇಕಿದೆ ಎಂದವರು ಹೇಳಿದ್ದಾರೆ.

ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಪಡೆಯಲು ಇನ್ನಷ್ಟು ತೂಕ ಇಳಿಸಿಕೊಳ್ಳಲು ಕಸರತ್ತು ಮುಂದುವರೆಸುವುದಾಗಿಯೂ ಫಿರೋಜಿಯೆ ಹೇಳಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ್ದ ಗಡ್ಕರಿ, ತಾವು ತೂಕ ಇಳಿಸಿಕೊಂಡ ಬಗ್ಗೆಯೂ ಮಾತನಾಡಿದ್ದರು.

## ನಗರದಲ್ಲಿ ಇಂದು ಚೈತನ್ಯ ಘೂಮರ್-2ಕೆ22

ಚೈತನ್ಯ ಹೈ-ಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮ್ಯಾನೇಜೆಂಟ್ ಅಂಡ್ ಸೈನ್ಸ್ ಕಾಲೇಜು ವತಿಯಿಂದ ಇಂದು ಬೆಳಿಗ್ಗೆ 9 ಗಂಟೆಗೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಚೈತನ್ಯ ಘೂಮರ್-2ಕೆ22 ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ ನಡೆಯಲಿದೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ಅಧೀಕ್ಷಕ ಸಿ.ಬಿ ರಿಷ್ಯಂತ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಕನ್ನಡದ ನಿರ್ದೇಶಕರಾದ ನಂದಕಿಶೋರ್, ಕನ್ನಡ ರ್‍ಯಾಂಪರ್ ಚಂದನ್ ಶೆಟ್ಟಿ ಹಾಗೂ ನಟ ಶ್ರೇಯಸ್ ಮಂಜು ಆಗಮಿಸುತ್ತಿದ್ದಾರೆ. ಕಾರ್ಯದರ್ಶಿ ಪ್ರೀತಿ ಉಪಸ್ಥಿತರಿರುವರು.

## ರಾಷ್ಟ್ರಪತಿ ಚುನಾವಣೆ : ಬಿಜೆಪಿಗೆ ಮತ್ತಷ್ಟು ಬಲ

### ರಾಜ್ಯಸಭಾ ಚುನಾವಣೆಯಲ್ಲಿ ನಿರೀಕ್ಷೆಗಿಂತ ಹೆಚ್ಚು ಸ್ಥಾನ

ನವದೆಹಲಿ, ಜೂ. 11 – ರಾಷ್ಟ್ರಪತಿ ಚುನಾವಣೆಗೆ ಮುಂಚೆ ನಡೆದ ರಾಜ್ಯಸಭಾ ಚುನಾವಣೆಗಳಲ್ಲಿ ಬಿಜೆಪಿ ಅನಿರೀಕ್ಷಿತ ಸ್ಥಾನಗಳನ್ನು ಗೆದ್ದಿರುವುದು ಹೆಚ್ಚಿನ ಬಲ ನೀಡಿದೆ.

57 ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಅದರಲ್ಲಿ ಬಿಜೆಪಿ 24 ಸ್ಥಾನ ಹೊಂದಿತ್ತು. ಚುನಾವಣೆಯಲ್ಲಿ 20 ಸ್ಥಾನ ಗಳಿಸುವ ಸಾಧ್ಯತೆ ಇತ್ತು. ಆದರೆ, ಸಣ್ಣ ಪಕ್ಷಗಳು ಹಾಗೂ ಸ್ವತಂತ್ರರ ಬೆಂಬಲದಿಂದ ಬಿಜೆಪಿ 22 ಸ್ಥಾನಗಳನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ.

ಮಹಾರಾಷ್ಟ್ರ, ಕರ್ನಾಟಕ ಹಾಗೂ ಹರಿಯಾಣಗಳಲ್ಲಿ ಬಿಜೆಪಿ ಎದುರಾಳಿಗಳಲ್ಲಿ ಒಮ್ಮತ ಇಲ್ಲದಿರುವುದು ಕಂಡು ಬಂದಿದೆ. ಇದು ಬಿಜೆಪಿ ಹೆಚ್ಚು ಸ್ಥಾನ ಗಳಿಸಲು ನೆರವಾಗಿದೆ.

ಆದರೆ, ರಾಜಸ್ಥಾನದಲ್ಲಿ ಬಿಜೆಪಿ ಶಾಸಕರೊಬ್ಬರು ಕಾಂಗ್ರೆಸ್ ಪರ ಮತ ಚಲಾಯಿಸಿರುವುದು ಆಘಾತ ನೀಡಿದೆ. ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚುವರಿಯಾಗಿ ಒಂದು ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ.

ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಮೈತ್ರಿಕೂಟದ ವಿರುದ್ಧ ಹೆಚ್ಚಿನ ಸ್ಥಾನ ಗಳಿಸಿರುವುದು ಬಿಜೆಪಿಯಲ್ಲಿ ಉತ್ಸಾಹ ತಂದಿದೆ.

ಕರ್ನಾಟಕದಲ್ಲಿ ಬಿಜೆಪಿ ಚುನಾವಣೆ ನಡೆದ ನಾಲ್ಕು ಸ್ಥಾನಗಳ ಪೈಕಿ ಮೂರರಲ್ಲಿ ಗೆಲುವು ಸಾಧಿಸಿದೆ. ಚುನಾವಣೆಯಲ್ಲಿ ಒಮ್ಮತಕ್ಕೆ ಬರಲು ಕಾಂಗ್ರೆಸ್ ಹಾಗೂ ಜೆಡಿಎಸ್ ವಿಫಲವಾಗಿದ್ದವು.

ಹರಿಯಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಜಯ್ ಮಾಕೆನ್ ಸೋಲು ಕಂಡಿದ್ದಾರೆ. ಕಾಂಗ್ರೆಸ್ ಶಾಸಕ ಕುಲ್‌ದೀಪ್ ಬಿಷ್ಣೋಯಿ ಅವರು ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಕಾರ್ತಿಕೇಯ ಶರ್ಮ ಪರ ಮತ ಚಲಾಯಿಸಿದ್ದಾರೆ.

15 ರಾಜ್ಯಗಳ 57 ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಇವರ ಪೈಕಿ 11 ರಾಜ್ಯಗಳ 41 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರು. ನಾಲ್ಕು ರಾಜ್ಯಗಳ 16 ಸ್ಥಾನಗಳಿಗಾಗಿ ಚುನಾವಣೆ ನಡೆದಿತ್ತು.

ಜುಲೈ 18ರಂದು ರಾಷ್ಟ್ರಪತಿ ಚುನಾವಣೆ ನಡೆಯಲಿದೆ. ಈ ನಡುವೆ, ರಾಜ್ಯಸಭೆಯಲ್ಲಿ ಹೆಚ್ಚಿನ ಬಲ ಸಿಕ್ಕಿರುವುದು ಬಿಜೆಪಿಯಲ್ಲಿ ಉತ್ಸಾಹ ಮೂಡಿಸಿದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನ ಮಾಡುವ ಕೂಟದ ಮತದಾರರ ಒಟ್ಟು ಮೌಲ್ಯ 10.86 ಲಕ್ಷವಾಗಿದೆ. ಬಿಜೆಪಿ ನೇತೃತ್ವದ ಮೈತ್ರಿಕೂಟ ಪ್ರಸಕ್ತ ಶೇ.48ರಷ್ಟು ಮತಗಳನ್ನು ಹೊಂದಿದೆ.

ವೈ.ಎಸ್.ಆರ್. ಕಾಂಗ್ರೆಸ್ ಹಾಗೂ ಬಿಜೆಡಿ ಮತ್ತಿತರೆ ಪ್ರಾಂತೀಯ ಪಕ್ಷಗಳ ಬೆಂಬಲದೊಂದಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಗೆಲುವು ಗಳಿಸಲು ಬಿಜೆಪಿ ಪ್ರಯತ್ನ ನಡೆಸಲಿದೆ.


## Akshara Jyothi Education Trust (R.)

# RURAL PUBLIC SCHOOL, DIDDIGE. JAGALUR (TQ).

## WE ARE HIRING !!

Teachers willing to serve in rural area for the growth of rural students with high ambition, here's a great opportunity to fulfil your dreams.

**POSITIONS AVAILABLE**

| POSTS | QUALIFICATION | NO. OF POSTS |
|---|---|---|
| PRO/Admin | Any master's degree with 3-5 years of School management and 8-10 years of Teaching | 01 |
| Kannada | D.Ed., B.A., B.Ed., M.A., B.Ed., Music/Singing. Experience will be a plus | 03 |
| English | D.Ed., B.A., B.Ed., M.A., B.Ed., | 03 |
| Science & Maths | BSc., B.Ed., or MSc B.Ed., | 03 |
| Computer Teacher | Computer course with any degree | 01 |
| KG Teacher | Montessori or equivalent | 04 |

**NOTE:-** ☛ Bus/van facility is available from Bilichodu & Arasikere (Harapanahalli Tq.) to school. ☛ Best opportunity for fresh college outputs.
☛ Boarding facility is available.
☛ Competitive salary will be offered to the right teachers.
☛Teachers with required qualifications can walk in for the interview.

**"Interested Teachers can attend the interview from 10.00 AM to 4.00 PM DAILY (Even on Saturdays & Sundays)"**

**Email id: sriaksharajyothi@gmail.com**
**Place: RURAL PUBLIC SCHOOL, DIDDIGE.**
**Ph.: 9902546021**


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ 1) ಶ್ರೀಯುತ ಗಣೇಶಪ್ಪ ಬ್ಯಾಡಗಿ ಬಿನ್ ಲೇಟ್ ಶಿವಪ್ಪ ಬ್ಯಾಡಗಿ, ವಯಸ್ಸು ಸುಮಾರು 70 ವರ್ಷ, ವಾಸ ಎಸ್.ಎಸ್. ಬಡಾವಣೆ, ದಾವಣಗೆರೆ ಹಾಗೂ ಲೇಟ್ ಪುಟ್ಟಪ್ಪ ಬ್ಯಾಡಗಿ ಇವರ ವಾರಸುದಾರರೆಲ್ಲರ ಪರವಾಗಿ ಶ್ರೀ ವೀರೇಂದ್ರ ಕುಮಾರ್ ಬ್ಯಾಡಗಿ, ವಯಸ್ಸು ಸುಮಾರು 35 ವರ್ಷ, ಇವರುಗಳು ಈ ಹಿಂದೆ ದಿನಾಂಕ : 20.02.2022ರ ಭಾನುವಾರ ಜನತಾವಾಣಿ ಪತ್ರಿಕೆಯ 5ನೇ ಪುಟದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಕೊಟ್ಟಿದ್ದ ರಾಮದಾಸ್ ಬಿನ್ ಪಾಂಡುರಂಗ ಶೇಟ್ ವಯಸ್ಸು ಸುಮಾರು 42 ವರ್ಷ, ಮನೆ ನಂ. 34/4, ಎಂ.ಕೆ. ಬಿಲ್ಡಿಂಗ್ ಹಿಂಭಾಗ, ಬಸವರಾಜಪೇಟೆ, ದಾವಣಗೆರೆ ಈತನು ಕೊಟ್ಟಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ ನಮೂದಿಸಿದಂತೆ ಷೆಡ್ಯೂಲ್ ಆಸ್ತಿಗಳ ಮೇಲೆ ದಾವಣಗೆರೆಯ ಸಿವಿಲ್ ನ್ಯಾಯಾಲಯದಲ್ಲಿ ಮತ್ತು ದಾವಣಗೆರೆ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತವೆ ಎನ್ನುವುದು ನಿಜ. ಆದರೆ ಸದರಿ ರಾಮದಾಸ್ ಈತನು ಹಾಕಿದ ಅರ್ಜಿಗಳು ದಾವಣಗೆರೆಯ ನ್ಯಾಯಾಲಯದಲ್ಲಿ ವಜಾ ಆಗಿ ಅವುಗಳ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ನಂ. 41870/2017 (ಜಿಎಂಸಿಪಿಸಿ) ಎಂಬ ಅರ್ಜಿಯನ್ನು ಸಲ್ಲಿಸಿ ಅದರಲ್ಲಿ ಆದ ಆದೇಶಾನುಸಾರ ಈಗ ದಾವಣಗೆರೆಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಫ್‌ಡಿಪಿ ನಂ. 9/2011 ಎಂಬ ಪ್ರಕರಣದಲ್ಲಿ ಹಾಜರಾಗಿ ಸದರಿ ಪ್ರಕರಣದ ಒಬ್ಬ ಪಕ್ಷದಾರನಾಗಿ ಪ್ರಕರಣವನ್ನು ಮುಂದುವರಿಸಿರುತ್ತಾನೆ. ಆದರೆ ಈ ಎಲ್ಲಾ ವಿಚಾರವನ್ನು ಮುಚ್ಚಿಟ್ಟು ತನ್ನಿಂದ ಖರೀದಿ ಮಾಡಿದವರ ಕಡೆಯಿಂದ ಷೆಡ್ಯೂಲ್ ಆಸ್ತಿಗಳಲ್ಲಿ ಒಂದೊಂದಾಗಿ ಆಸ್ತಿಗಳನ್ನು ಕಾನೂನುಬಾಹಿರವಾಗಿ ಪರಭಾರೆ ಮಾಡುತ್ತಿದ್ದಾನೆಂದು ನಮಗೆ ನಂಬಲರ್ಹವಾಗಿ ತಿಳಿದುಬಂದಿದೆ. ಆದ ಕಾರಣ ಈ ಬಗ್ಗೆ ಸಾರ್ವಜನಿಕರು ಯಾರಾದರೂ ಖರೀದಿ ಮಾಡುವ ವಿಚಾರವಿದ್ದಲ್ಲಿ ಮೇಲ್ಕಡ ನ್ಯಾಯಾಲಯದ ಪ್ರಕರಣದ ದಾಖಲಾತಿಗಳನ್ನು ಪರಿಶೀಲಿಸಿ ಮುಂದುವರಿಯ ತಕ್ಕದ್ದು ಎಂದು ತಿಳಿಸಲಾಗಿದೆ. ಈ ಹಿಂದೆಯೂ ಸಹಿತ ಅನೇಕ ಬಾರಿ ಮೇಲೆ ಹೇಳಿದ ವ್ಯಕ್ತಿಗಳು ಸಾರ್ವಜನಿಕರ ಗಮನಕ್ಕೆ ರಾಮದಾಸ್‌ರವರ ಕಾನೂನು ಬಾಹಿರ ಚಟುವಟಿಕೆಗಳನ್ನು ತರುವ ಸಲುವಾಗಿ ಪ್ರಕಟಣೆಯನ್ನು ಕೊಟ್ಟಿರುತ್ತಾರೆ. ಆದ ಕಾರಣ ಸಾರ್ವಜನಿಕರು ಷೆಡ್ಯೂಲ್‌ನಲ್ಲಿರುವ ಆಸ್ತಿಗಳ ಬಗ್ಗೆ ವ್ಯವಹಾರ ಮಾಡಬಾರದೆಂದು ಈ ಪ್ರಕಟಣೆಯ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ. ಕೆಳಕಂಡ ಷೆಡ್ಯೂಲ್‌ನಲ್ಲಿರುವ ಆಸ್ತಿಗಳಲ್ಲಿ ಮೇಲೆ ತಿಳಿಸಿರುವ 1,2 ಮತ್ತು ಇತರೆ ಕಕ್ಷಿದಾರರ ಹಕ್ಕುಗಳು ಈ ಹಿಂದೆ ಸಂಬಂಧಪಟ್ಟ ಹಲವು ಪ್ರಕರಣಗಳಲ್ಲಿ ಕಾನೂನು ರೀತಿಯಲ್ಲಿ ಸ್ಥಾಪಿತವಾಗಿರುತ್ತವೆ.

**ಷೆಡ್ಯೂಲ್ : 1) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ದೊಡ್ಡಬಾತಿ ಗ್ರಾಮದ ರಿ.ಸ.ಂನಂ. 81/1 ರಲ್ಲಿರುವ ವಿಸ್ತೀರ್ಣ 6 ಎಕರೆ, 17-ಗುಂಟೆ ಇದಕ್ಕ ಚಕ್ಕುಬಂದಿ : ಪೂರ್ವಕ್ಕೆ-ಟಿ.ಎಂ. ಸಿದ್ದಾರಾಧ್ಯ ಇವರ ಜಮೀನು, ಪಶ್ಚಿಮಕ್ಕೆ-ದಾವಣಗೆರೆ ನೀಲಪ್ಪ ವಗೈರೆ ಇವರ ಜಮೀನು, ಉತ್ತರಕ್ಕೆ-ಕರೂರು ತಳವಾರ ಸಿದ್ದಪ್ಪ ವಗೈರೆ ಇವರ ಜಮೀನು, ದಕ್ಷಿಣಕ್ಕೆ -ಗ್ಯಾಂಗಿನ ಹನುಮಂತಪ್ಪ, ಬಸವರಾಜಪ್ಪ ಇವರ ಜಮೀನು, ಈ ಮಧ್ಯದ ಸೊತ್ತು. 2) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ರಿ.ಸ.ನಂ. 88/1ರಲ್ಲಿರುವ ವಿಸ್ತೀರ್ಣ5-ಎಕರೆ,00-ಗುಂಟೆ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಟಿ. ಎಂ. ಸಿದ್ದಾರಾಧ್ಯ ಇವರ ಜಮೀನು, ಪಶ್ಚಿಮಕ್ಕೆ : ದಾವಣಗೆರೆ ನೀಲಪ್ಪ ಇವರ ಜಮೀನು ಉತ್ತರಕ್ಕೆ ಸೈಯದ್ ಸಬ್ದುಲ್ ರಶೀದ್ ಸಾಬ್ ಇವರ ಜಮೀನು, ದಕ್ಷಿಣಕ್ಕೆ : ಸೈಯದ್ ಇಸ್ಮಾಯಿಲ್ ಸಾಬ್ ಇವರ ಜಮೀನು ಈ ಮಧ್ಯದ ಸೊತ್ತು 3) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕರೂರು ಗ್ರಾಮದ ರಿ.ಸ.ನಂ. 31/2ಎ ಇದರ ವಿಸ್ತೀರ್ಣ 2-ಎಕರೆ, 28-ಗುಂಟೆ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಪೂರ್ವಕ್ಕೆ;ಗಫರ್ ಸಾಬ್ ಮತ್ತು ಕ್ಯಾತಪ್ಪ ಇವರ ಜಮೀನುಗಳು, ಪಶ್ಚಿಮಕ್ಕೆ: ತಳವಾರ ಸಿದ್ದಪ್ಪ ಇವರ ಜಮೀನು, ಉತ್ತರಕ್ಕೆ : ಯರಗುಂಟೆ ಕಲ್ಯಾಣಪ್ಪ ಇವರ ಜಮೀನು, ದಕ್ಷಿಣಕ್ಕೆ ತಳವಾರ ಸಣ್ಣಪ್ಪ ಇವರ ಜಮೀನು. ಈ ಮಧ್ಯದ ಸೊತ್ತು. 4) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ದೊಡ್ಡಬಾತಿ ಗ್ರಾಮದ ರಿ.ಸ.ನಂ. 99/ಪಿ 6 ರಲ್ಲಿರುವ ಇದರ ವಿಸ್ತೀರ್ಣ ಎಕರೆ-4, ಗುಂಟೆ ಇಲ್ಲ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ರೈಲ್ವೆ ರಸ್ತೆ, ಪಶ್ಚಿಮಕ್ಕೆ : ಹುಚ್ಚ ಸಿದ್ದಪ್ಪನವರ ಜಮೀನು, ಉತ್ತರಕ್ಕೆ : ಸರ್ವೆ ನಂ. 100ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 98ರ ಜಮೀನು, ದಕ್ಷಿಣ: ಸರ್ವೆ ನಂ. 98ರ ಜಮೀನು, ಇದರ ಮಧ್ಯದ ಸೊತ್ತು.**

**ಸಹಿ/-**
**ಹೆಚ್.ಎಸ್. ವೆಂಕಟೇಶ್**
ಕಕ್ಷಿದಾರರ ಪರ ವಕೀಲರು
**ಮೊ: 97432 46660**

**ಸಹಿ/- ಗಣೇಶಪ್ಪ ಬ್ಯಾಡಗಿ ಬಿನ್ ಲೇಟ್ ಶಿವಪ್ಪ ಬ್ಯಾಡಗಿ,**
**ವೀರೇಂದ್ರ ಕುಮಾರ್ ಬ್ಯಾಡಗಿ**
**ಬಿನ್ ಲೇಟ್ ಪುಟ್ಟಪ್ಪ ಬ್ಯಾಡಗಿ ಕಕ್ಷಿದಾರರು**

## ರಾಮಗೊಂಡನಹಳ್ಳಿಯಲ್ಲಿ ರೈತರೊಂದಿಗೆ ವಿಚಾರ ವಿನಿಮಯ



ದಾವಣಗೆರೆ, ಜೂ.11- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಾಡಾ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಬಾಡ ಹಾಗೂ ರಾಮಗೊಂಡನಹಳ್ಳಿ ಗ್ರಾಮದಲ್ಲಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಎಂಟು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸೇವಾ ಸುಹಾಸನ ಮತ್ತು ಬಡವರ ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ರೈತ ಫಲಾನುಭವಿಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಬಿಜೆಪಿ ಮಂಡಲ ಅಧ್ಯಕ್ಷ ದೇವೇಂದ್ರಪ್ಪ, ಮಂಡಲ ಅಧ್ಯಕ್ಷ ಅಶೋಕ್, ರಾಜ್ಯ ಸಂಚಾಲಕ ಬಿ.ಎಂ. ಸತೀಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಕೋಶಾಧ್ಯಕ್ಷ ಅಣಜಿ ಗುಡ್ಡೇಶ್, ಜಿಲ್ಲಾ ಕಾರ್ಯದರ್ಶಿ ಶಿವಪ್ರಕಾಶ್, ಬಾಡಾ ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿ.ಪ್ರಕಾಶ್ ಮತ್ತು ಇತರರು ಭಾಗವಹಿಸಿದ್ದರು.

# ಅರ್ಜುನ್ ಪ್ರಶಸ್ತಿ ಸೇಂಟ್ ಪಾಲ್ಸ್‌ಗೆ ಮತ್ತೆ ಬರಲಿ



**ಮಾಜಿ ಶಾಸಕ ಬಿ.ಪಿ.ಹರೀಶ್ ಆಶಯ**

ದಾವಣಗೆರೆ, ಜೂ. 11 - ದಾವಣಗೆರೆಯಲ್ಲಿ ಅತ್ಯುತ್ತಮ ಶಿಕ್ಷಣ ನೀಡಿದಂತಹ, ಅದರ ಜೊತೆಯಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಅಂದಿನ ಚಿತ್ರದುರ್ಗ (ಈಗಿನ ದಾವಣಗೆರೆ ಜಿಲ್ಲೆ) ಜಿಲ್ಲೆಗೆ ಅರ್ಜುನ್ ಪ್ರಶಸ್ತಿಯಂತಹ ಕ್ರೀಡಾ ಕಿರೀಟವನ್ನು ತಂದುಕೊಟ್ಟಂತಹ ಶಾಲೆ ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆ ಎಂದು ಮಾಜಿ ಶಾಸಕರೂ ಆದ ಶಾಲೆಯ ಹಳೆಯ ವಿದ್ಯಾರ್ಥಿ ಬಿ.ಪಿ. ಹರೀಶ್ ಶ್ಲಾಘಿಸಿದರು.

ನಗರದ ಪಿ.ಜೆ.ಬಡಾವಣೆಯಲ್ಲಿರುವ ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಸಂತ ಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವದ ಅಂಗವಾಗಿ ಇಂದು ಆಯೋಜಿಸಿದ್ದ ಕ್ರೀಡಾಕೂಟವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಓದಿದ ಶಾಲೆ ಅಮೃತ ಮಹೋತ್ಸವ ಆಚರಿಸುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ. ದಾವಣಗೆರೆಯು ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಸಂದರ್ಭದಲ್ಲಿ ಈ ಶಾಲೆ ವಿದ್ಯಾರ್ಥಿನಿ ಏಂಜೆಲ್ ಮೇರಿ, ಕ್ರೀಡೆಗಾಗಿ ಕೊಡಮಾಡುವ ದೇಶದ ಅತ್ಯುತ್ತಮ ಪ್ರಶಸ್ತಿಯಾದ ಅರ್ಜುನ್ ಪ್ರಶಸ್ತಿ ಪಡೆದು ಶಾಲೆಗೆ ಕೀರ್ತಿ ತಂದಿದ್ದರು. ಆಗ ಖೋ ಖೋ, ಥ್ರೋ ಬಾಲ್ ವಿಭಾಗದಲ್ಲಿ ಯಾವತ್ತೂ ಸೇಂಟ್ ಪಾಲ್ಸ್ ಕಾನ್ವೆಂಟ್ ಛಾಂಪಿಯನ್ಸ್ ಬೇರೆ ಯಾವ ತಂಡಗಳಿಗೂ ಗೆಲ್ಲಲು ಅವಕಾಶ ಕೊಡುತ್ತಿರಲಿಲ್ಲ. ಬಡವರಿಗೆ ಉಚಿತ ಶಿಕ್ಷಣ ನೀಡಿದ ಶಾಲೆ ಇದು. ಮತ್ತೊಮ್ಮೆ ಈ ಶಾಲೆಯ ವಿದ್ಯಾರ್ಥಿನಿಯರಿಂದ ಅರ್ಜುನ ಪ್ರಶಸ್ತಿ ಪಡೆಯುತ್ತೇವೆ ಎಂಬ ಆಸೆ ನಮ್ಮಲ್ಲಿ ಇದೆ. ಅರ್ಜುನ ಪ್ರಶಸ್ತಿ ಪಡೆಯುವಂತಹ ಶಕ್ತಿಯನ್ನು ಆ ಭಗವಂತನು ನಿಮಗೆ ನೀಡಲಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಹೈಸ್ಕೂಲ್ ವಿಭಾಗದ ಮುಖ್ಯಸ್ಥರಾದ ಸಿಸ್ಟರ್ ಮಾರ್ಜರಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂತ ಪೌಲರ ವಿದ್ಯಾಸಂಸ್ಥೆಯ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಈಗಾಗಲೇ ಶಾಲಾ ಮಕ್ಕಳು, ಶಿಕ್ಷಕರಿಂದ ವಿಶ್ವ ಪರಿಸರ ದಿನಾಚರಣೆ, ತಂಬಾಕು ರಹಿತ ದಿನ ಜಾಥಾ, ಚಿತ್ರಕಲಾ ಸ್ಪರ್ಧೆ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಈಗ ಕ್ರೀಡೋತ್ಸವ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ ಜೆಜೆಎಂ ದಂತ ಕಾಲೇಜಿನ ಡಾ. ಐನಹಳ್ಳಿ ಮಹಾರುದ್ರ ಪ್ರಸಾದ, ಶಾಲೆಯ ಮುಖ್ಯಸ್ಥರಾದ ಸಿಸ್ಟರ್ ಸಮಂತ, ಸಿಸ್ಟರ್ ಅನೀಸ್, ಸಿಸ್ಟರ್ ಆಲ್ಬಿನ, ಸಿಸ್ಟರ್ ವಿಜೇತಾ, ಸಿಸ್ಟರ್ ಫ್ರಾನ್ಸಿನಾ, ಕ್ಲೆಮೆನ್ಸಿಯ, ಶಿಕ್ಷಕರಾದ ಗೋವಿಂದಪ್ಪ, ಟಿ.ಎಂ.ರವೀಂದ್ರಸ್ವಾಮಿ, ಕಿರಣ್, ರೀಟಾ, ಪ್ರೇಮ, ಎಂ.ಕೆ. ಮಂಜುಳ, ಜಸ್ಸಿ ಉಪಸ್ಥಿತರಿದ್ದರು.

## ರಾಜ್ಯಸಭೆಯಲ್ಲಿ ಬಿಜೆಪಿ ಸಂಖ್ಯಾಬಲ 92ಕ್ಕೆ ಇಳಿಕೆ

ನವದೆಹಲಿ, ಜೂ. 11 – ರಾಜ್ಯಸಭೆಯಲ್ಲಿ ಬಿಜೆಪಿಯ ಸಂಖ್ಯಾಬಲ 95 ರಿಂದ 92ಕ್ಕೆ ಇಳಿಕೆಯಾಗಿದೆ. ಇದೇ ವೇಳೆ ಕಾಂಗ್ರೆಸ್ ಸದಸ್ಯರ ಸಂಖ್ಯೆ 29ರಿಂದ 31ಕ್ಕೆ ಏರಿಕೆಯಾಗಿದೆ.

ಇತ್ತೀಚೆಗೆ ರಾಜ್ಯಸಭೆಯ 57 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 22ರಲ್ಲಿ ಗೆಲವು ಸಾಧಿಸಿದೆ. ಕಾಂಗ್ರೆಸ್ ಒಂಭತ್ತರಲ್ಲಿ ಗೆಲುವು ದಾಖಲಿಸಿದೆ.

ನಿರ್ಗಮಿತ 57 ಸದಸ್ಯರಲ್ಲಿ ಬಿಜೆಪಿ 25 ಸಂಸದರನ್ನು ಹೊಂದಿತ್ತು. ಕಾಂಗ್ರೆಸ್ ಏಳು ಸದಸ್ಯರನ್ನು ಹೊಂದಿತ್ತು. ಬಿಜೆಪಿ ಹಾಗೂ ಕಾಂಗ್ರೆಸ್‌ಗಳೆರಡೂ ಹೊಸಬರು ಹಾಗೂ ಯುವಕರಿಗೆ ಆದ್ಯತೆ ನೀಡಿದ್ದವು. ಯುವ ಸಂಸದರೊಂದಿಗೆ ಕಾಂಗ್ರೆಸ್ ರಾಜ್ಯಸಭೆಯಲ್ಲಿ ಹೆಚ್ಚು ತೀವ್ರವಾಗಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುವ ನಿರೀಕ್ಷೆ ಇದೆ.

ಹರಿಯಾಣದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದಿರುವ ಕಾರ್ತಿಕೇಯ ಶರ್ಮ ಅವರು ಬಿಜೆಪಿಗೆ ಬೆಂಬಲಿಸಲಿದ್ದಾರೆ. ವೈ.ಎಸ್.ಆರ್. ಕಾಂಗ್ರೆಸ್ ಸದಸ್ಯರ ಸಂಖ್ಯೆ 6ರಿಂದ ಒಂಭತ್ತಕ್ಕೆ ಹೆಚ್ಚಾಗಿದೆ. ಆಮ್ ಆದ್ಮಿ ಪಾರ್ಟಿ ಸದಸ್ಯರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಡಿಎಂಕೆ, ಬಿಜೆಡಿ, ಟಿಆರ್‌ಎಸ್, ಜೆಡಿಯು, ಎನ್‌ಸಿಪಿ ಹಾಗೂ ಶಿವಸೇನೆ ಸಂಸದರ ಸಂಖ್ಯೆ ಈಗಿರುವ ಹಂತದಲ್ಲೇ ಮುಂದುವರೆದಿದೆ. ಸಮಾಜವಾದಿ ಪಕ್ಷದ ಸಂಸದರ ಸಂಖ್ಯೆ ಐದರಿಂದ ಮೂರಕ್ಕೆ ಇಳಿಕೆಯಾಗಿದೆ. ಬಿ.ಎಸ್.ಪಿ.ಯ ಕೇವಲ ಒಬ್ಬರು ಸದಸ್ಯರು ಮಾತ್ರ ಸದನದಲ್ಲಿ ಉಳಿದಿದ್ದಾರೆ.




ಜೋಕರ್‌ನ ಹಾಸ್ಯ, ರಿಂಗ್‌ನೊಳಗೆ ಬಂಧಿಯಾಗುವ ಬಾಲಕಿ, ಮೈನವಿರೇಳಿಸುವ ಯುವಕನ ಕಸರತ್ತು, ನಡುನಡುವೆ ಶ್ವಾನಗಳ ಚಮತ್ಕಾರ. ಇದು, ದಾವಣಗೆರೆಯ ಹದಡಿ ರಸ್ತೆಯಲ್ಲಿ ನಡೆಯುತ್ತಿರುವ ಸರ್ಕಸ್‌ನಲ್ಲಿನ ಸಾಕ್ಷಾತ್ಕಾರ.

## ನಗರದಲ್ಲಿನ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್ಸ್‌ಗೆ ಇಂದು ಕೊನೆಯ ದಿನ



ದಾವಣಗೆರೆ, ಜೂ. 11- ನಗರದ ಹೋಟೆಲ್ ಸದರ್ನ್ ಸ್ಟಾರ್ (ಶಾಮನೂರು ಶಿವಶಂಕರಪ್ಪ ಕನ್ವೆನ್ಷನ್ ಸೆಂಟರ್)ನಲ್ಲಿ ಅತೀ ದೊಡ್ಡ ರಿಯಾಯಿತಿ ದರದಲ್ಲಿ ಬ್ರ್ಯಾಂಡೆಡ್ ಸಿದ್ದ ಉಡುಪುಗಳ ಮಾರಾಟ ಇದೇ ದಿನಾಂಕ 4ರಿಂದ ಆರಂಭಗೊಂಡಿತ್ತು.

ನಾಳೆ ಭಾನುವಾರ ಕೊನೆಯ ದಿನ ವಾಗಿದೆ. 1000 ವಿವಿಧ ಪ್ರಕಾರದ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್, ಪ್ಯಾಂಟ್ ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಶರ್ಟ್, ಪ್ಯಾಂಟ್, ಬಿಗ್ ಬ್ರ್ಯಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಹುಡುಗಿಯರ ಟಾಪ್, ಜೀನ್ಸ್ ಪ್ಯಾಂಟ್ ಕಾಟನ್ ಪ್ಯಾಂಟ್, ಪ್ಯಾಂಟ್, ಪುಲೋವರ, ಇತ್ಯಾದಿ ಹಾಗೂ ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಫಿಲ್ಲೋ ಕವರ್, ಸೋಫಾ ಕವರ್ ಲಭ್ಯವಿವೆ.

## ವಿದ್ಯುತ್ ಬಾಕಿ ಮೊತ್ತ ಪಾವತಿಗೆ 7 ದಿನಗಳ ಗಡುವು

ದಾವಣಗೆರೆ, ಜೂ. 11- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಮೇ-22 ರ ಅಂತ್ಯಕ್ಕೆ ಬೆಸ್ಕಾಂ ದಾವಣಗೆರೆ ಉಪ ವಿಭಾಗ ವ್ಯಾಪ್ತಿಯಲ್ಲಿನ 19 ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಒಳಪಡುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಬಾಕಿ ಮೊತ್ತವನ್ನು ಏಳು ದಿನಗಳೊಳಗಾಗಿ ಪಾವತಿಸುವಂತೆ ಬೆಸ್ಕಾಂ ಸೂಚಿಸಿದೆ.

ವಿದ್ಯುತ್ ಬಾಕಿ ಪಾವತಿಸದಿದ್ದಲ್ಲಿ ಗ್ರಾ.ಪಂ. ಪಿಡಿಓ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವ ರಗಳ ಕ್ರೋಢೀಕರಿಸಿದ ವಿದ್ಯುತ್ ಬಾಕಿ ಮೊತ್ತವನ್ನು ಗ್ರಾಪಂ ಪಿಡಿಓ ಕಚೇರಿಯ ಆರ್ ಆರ್ ಸಂಖ್ಯೆಗೆ ವರ್ಗಾವಣೆ ಮಾಡಿ ವಿದ್ಯುತ್ ಕಡಿತಗೊಳಿಸಲಾಗುವುದು ಎಂದು ಎಇಇ ತಿಳಿಸಿದ್ದಾರೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಆಗುವ ತೊಂದರೆಗೆ ಬೆಸ್ಕಾಂ ಗ್ರಾಮೀಣ ಉಪ ವಿಭಾಗ ಜವಾಬ್ದಾರರಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ದಾವಣಗೆರೆ ಉಪ ವಿಭಾಗ ವ್ಯಾಪ್ತಿಯಲ್ಲಿನ ಎಲೆ ಬೇತೂರು, ಬಸವನಾಳ್, ಕಾಡಜ್ಜಿ, ಕಡ್ಲೇಬಾಳು, ಆವರಗೊಳ್ಳ, ಕಕ್ಕರಗೊಳ್ಳ, ಬೆಳವನೂರು, ಹೊನ್ನೂರು, ಐಗೂರು, ತೋಳಹುಣಸೆ, ಶಿರಮಗೊಂಡನಹಳ್ಳಿ, ಮುದಹದಡಿ, ಹದಡಿ, ಕೈದಾಳೆ, ಕನಗೊಂಡನಹಳ್ಳಿ, ಕುಕ್ಕುವಾಡ, ಲೋಕಿಕೆರೆ, ಮತ್ತಿ, ಶ್ಯಾಗಲೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಶುಲ್ಕ 996.95 ಕೋಟಿ ಬಾಕಿ ಇದೆ.

## ನಗರದಲ್ಲಿ ಇಂದು ನಡೆಯಬೇಕಿದ್ದ ಸಮಾವೇಶ ಮುಂದೂಡಿಕೆ

ದಾವಣಗೆರೆ, ಜೂ. 11- ಪ್ರವಾದಿ ಮಹಮ್ಮದ್‌ರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದರ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿರುವುದರಿಂದ ನಾಳೆ ದಿನಾಂಕ 12 ರ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಜನಾಧಿಕಾರ ಸಮಾವೇಶವನ್ನು ಮುಂದೂಡಲಾಗಿದೆ ಎಂದು ಚಿತ್ರದುರ್ಗ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಬಾಳೆಕಾಯಿ ಶ್ರೀನಿವಾಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಳೆ ಭಾನುವಾರ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಜನಾಧಿಕಾರ ಸಮಾವೇಶವನ್ನು ಮುಂದೂಡಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಆರ್. ಭಾಸ್ಕರ್ ಪ್ರಸಾದ್, ಅಫ್ಸರ್ ಕೊಡ್ಲಿಪೇಟೆ, ರಿಯಾಜ್ ಅಹ್ಮದ್ ರಜ್ವಿ, ಸೈಯದ್ ಅಷ್ಫಾಕ್ ಉಪಸ್ಥಿತರಿದ್ದರು.

# ಗೋವಿನಹಾಳ್ : ಕೆಎಸ್ಸಾರ್ಟಿಸಿ ಬಸ್‌ಗೆ ಚಾಲನೆ



ಮಲೇಬೆನ್ನೂರು, ಜೂ.11- ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪ್ರತಿ ಗ್ರಾ.ಪಂ.ಗೂ ಭೇಟಿ ನೀಡಿ ಕುಂದು-ಕೊರತೆ ಸಭೆ ನಡೆಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಶಾಸಕ ಎಸ್. ರಾಮಪ್ಪ ತಿಳಿಸಿದರು.

ಗೋವಿನಹಾಳ್ ಗ್ರಾಮದಲ್ಲಿ ಮಲೇಬೆನ್ನೂರಿನಿಂದ ಕೊಕ್ಕನೂರು-ಗೋವಿನಹಾಳ್-ನಂದಿಗುಡಿ-ತುಮ್ಮಿನಕಟ್ಟಿ ಮಾರ್ಗವಾಗಿ ಉಕ್ಕಡಗಾತ್ರಿಗೆ ತೆರಳುವ ಕೆಎಸ್ಸಾರ್ಟಿಸಿ ಬಸ್‌ಗೆ ಇಂದು ಹಸಿರು ನಿಶಾನೆ ತೋರಿಸಿ ಅವರು ಮಾತನಾಡಿದರು.

ಮಲೇಬೆನ್ನೂರು ಪುರಸಭೆ ಸೇರಿದಂತೆ, ಅನೇಕ ಗ್ರಾ.ಪಂ.ಗಳಲ್ಲಿ ಇ-ಸ್ವತ್ತು ಪಡೆಯಲು ಅಧಿಕಾರಿಗಳಿಂದ ಹಣದ ಬೇಡಿಕೆ ಇರುವುದು ಕಂಡುಬರುತ್ತಿದೆ. ಈ ಬಗ್ಗೆ ಸಾರ್ವಜನಿಕರು ಸಾಕಷ್ಟು ದೂರಿದ್ದಾರೆ. ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಮುಖೇನ ತಿಳಿಸುವುದಾಗಿ ರಾಮಪ್ಪ ಹೇಳಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿನಿಂದಲೂ ಬಡವರಿಗೆ ಮನೆಗಳನ್ನು ನೀಡುತ್ತಿಲ್ಲ. ಈಗಲೂ ಕೊರೊನಾ ನೆಪ ಹೇಳುತ್ತಿದೆ. ಆದರೂ ಒತ್ತಡ ಹಾಕಿ ಹರಿಹರ ನಗರಸಭೆಗೆ 500, ಮಲೇಬೆನ್ನೂರು ಪುರಸಭೆಗೆ 400 ಮತ್ತು ಗ್ರಾ.ಪಂ.ಗಳಿಗೆ ತಲಾ 30 ಮನೆಗಳನ್ನು ಮಂಜೂರು ಮಾಡಿಸಿದ್ದೇನೆ. ಇನ್ನೂ ಹೆಚ್ಚಿನ ಮನೆಗಳ ಬೇಡಿಕೆ ಇದ್ದು, ಮಂಜೂರು ಮಾಡಿಸಲು ಹೋರಾಟ ಮಾಡುತ್ತೇನೆ ಎಂದು ಹೇಳಿದರು.

ಗ್ರಾಮದ ಪಾಳ್ಯದ ಬಸವನಗೌಡ, ಬಿ.ಎಸ್. ಬಸವಲಿಂಗಪ್ಪ ಮಾತನಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಜಿಗಳಿ ಆನಂದಪ್ಪ, ಹರಿಹರ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಗ್ರಾಮದ ಮುಖಂಡರಾದ ಜಿ.ಎನ್. ಭರಮಗೌಡ, ಬಿ.ಹೆಚ್. ಗದಿಗೆಪ್ಪ, ಕೆ.ಹೆಚ್. ಚಂದ್ರಪ್ಪ, ಭದ್ರಾ ಕಾಡಾ ಸದಸ್ಯ ಕೆ.ಜಿ. ರಾಜಪ್ಪ, ಎ.ಪಿ. ಚಂದ್ರಪ್ಪ, ಪಿ. ರಂಗಪ್ಪ, ರವದಿಗೌಡ್ರ ನಾಗರಾಜಪ್ಪ, ಮದರ್‌ಸಾಬ್, ವೈ. ಮರಿಯಪ್ಪ, ದಡ್ಡಿ ರಾಜೀವ್, ನಂದಿಗುಡಿ ವೀರಯ್ಯ, ಹಿಂಡಸಘಟ್ಟಿ ತಿಪ್ಪೇಸ್ವಾಮಿ, ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ಸಾಬೀರ್ ಅಲಿ, ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

**ಕಾಂಗ್ರೆಸ್ ಸೇರ್ಪಡೆ :** ಗ್ರಾಮದ ಮುಖಂಡರ ಬಸವಲಿಂಗಪ್ಪ, ನಾಗರಾಜಪ್ಪ, ಸಹೋದರರು ಬಿಜೆಪಿ ತೊರೆದು ಶಾಸಕ ರಾಮಪ್ಪ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು.

**ಆಸ್ಪತ್ರೆಗೆ ಭೇಟಿ :** ನಂದಿಗುಡಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿದ ಶಾಸಕ ರಾಮಪ್ಪ ಅವರು ಈ ವೇಳೆ ವೈದ್ಯಾಧಿಕಾರಿ ಗೈರು ಹಾಜರಾಗಿರುವ ಬಗ್ಗೆ ಡಿಹೆಚ್‌ಓಗೆ ತಿಳಿಸಿ, ಇಲ್ಲಿ ಜನರಿಗೆ ಚಿಕಿತ್ಸೆ ನೀಡುತ್ತಿಲ್ಲ, ಮಾತ್ರೆ ಕೊಡುತ್ತಿಲ್ಲ ಎಂಬ ದೂರು ಇದೆ ಎಂದು ತಿಳಿಸಿ ಕ್ರಮಕ್ಕೆ ಸೂಚಿಸಿದರು.

## ಒಂದೇ ದಿನ 8 ಸಾವಿರ ಸೋಂಕಿತರು

ನವದೆಹಲಿ, ಜೂ. 11 – ದೇಶದಲ್ಲಿ ಶನಿವಾರ ಒಂದೇ ದಿನ 8 ಸಾವಿರಕ್ಕೂ ಹೆಚ್ಚು ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. 103 ದಿನಗಳ ನಂತರ ಇಷ್ಟು ಸಂಖ್ಯೆಯ ಸೋಂಕಿತರು ಪತ್ತೆಯಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ 8,329 ಸೋಂಕಿತರು ಕಂಡು ಬಂದಿದ್ದಾರೆ. ಇದೇ ಅವಧಿಯಲ್ಲಿ 10 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಈ ಅವಧಿಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 4,103ರಷ್ಟು ಹೆಚ್ಚಾಗಿ 40,370ಕ್ಕೆ ತಲುಪಿದೆ.

## ಜಿಲ್ಲಾ ವಿಮಾ ಕಚೇರಿ ಸ್ಥಳಾಂತರ


ದಾವಣಗೆರೆ, ಜೂ. 11- ನಗರದ ವಸಂತ ರಸ್ತೆಯಲ್ಲಿದ್ದ ಜಿಲ್ಲಾ ವಿಮಾ ಕಚೇರಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವ ಕಾರಣ, ಎಂಸಿಸಿ 'ಬಿ' ಬ್ಲಾಕ್, ಮಾಮಾಸ್ ಜಾಯಿಂಟ್ ರೋಡ್‌ನಲ್ಲಿರುವ ಗಂಗೋತ್ರಿ ಬಿಲ್ಡಿಂಗ್ ಇಲ್ಲಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಜಿಲ್ಲಾ ವಿಮಾಧಿಕಾರಿ ತಿಳಿಸಿದ್ದಾರೆ.

## ಸಾರಥಿಯಲ್ಲಿ ಜೆಡಿಎಸ್ ಪದಗ್ರಹಣ, ಸಮಾವೇಶ

ಹರಿಹರ, ಜೂ. 11 - ಜೆಡಿಎಸ್ ಪಕ್ಷದ ಬಲವರ್ಧನೆಗೆ ಪದಾಧಿಕಾರಿಗಳ ಪದಗ್ರಹಣ, ವಿವಿಧ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ, ಪಕ್ಷ ಸಂಘಟನೆ ಮತ್ತು ಸಾರ್ವಜನಿಕ ಬೃಹತ್ ಸಮಾವೇಶವನ್ನು ಹರಿಹರ ತಾಲ್ಲೂಕಿನ ಸಾರಥಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 13 ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ತಿಳಿಸಿದ್ದಾರೆ.

ನಗರದ ಜೆಡಿಎಸ್ ಕಚೇರಿಯ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮಾರಂಭದ ವೇದಿಕೆಯ ಅಧ್ಯಕ್ಷತೆಯನ್ನು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ವಹಿಸಲಿದ್ದಾರೆ. ಉದ್ಘಾಟನೆಯನ್ನು ಮಾಜಿ ಸಚಿವ ಎನ್. ಎಂ. ನಬಿ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಬಿ.ಬಿ. ನಿಂಗಯ್ಯ, ಗ್ರಾಮಾಂತರ ಘಟಕದ ಜೆಡಿಎಸ್ ಅಧ್ಯಕ್ಷ ಪರಮೇಶ್ವರಪ್ಪ ಸೇರಿದಂತೆ, ಹಲವಾರು ಪಕ್ಷಗಳ ನಾಯಕರು ಆಗಮಿಸಲಿದ್ದಾರೆ.


|| ಶ್ರೀ ಸಿದ್ದೇಶ್ವರ ಪ್ರಸನ್ನ || || ಶ್ರೀ ಗುರು ಬಸವಲಿಂಗಾಯ ನಮಃ ||





**ಮಲ್ಲಿಕಾರ್ಜುನ ಭಾರತ್ ಗ್ಯಾಸ್ ಏಜೆನ್ಸಿ**

ಸಂಗೊಳ್ಳಿ ರಾಯಣ್ಣ ವೃತ್ತದ ಹತ್ತಿರ, ರಿಂಗ್ ರೋಡ್, ದಾವಣಗೆರೆ.

ಮೊ: 96631 49202, 96206 41610

**ನೂತನ ಕಛೇರಿ ಆರಂಭ**

ದಿನಾಂಕ 12.06.2022ರ ಭಾನುವಾರ ಸಮಯ: ಬೆಳಿಗ್ಗೆ 11.30ಕ್ಕೆ

**ಶ್ರೀ ಬಸವ ಪ್ರಭು ಸ್ವಾಮೀಜಿಗಳು**

ವಿರಕ್ತಮಠ, ದಾವಣಗೆರೆ. ಇವರುಗಳ ದಿವ್ಯ ಸಾನ್ನಿಧ್ಯದಲ್ಲಿ

**ಮಲ್ಲಿಕಾರ್ಜುನ ಭಾರತ್ ಗ್ಯಾಸ್ ಏಜೆನ್ಸಿ**

ಆಫೀಸ್ ಪ್ರಾರಂಭ ಮಾಡಲಾಗುವುದು ತಾವುಗಳು ಆಗಮಿಸಿ ಶುಭ ಕೋರಬೇಕಾಗಿ ವಿನಂತಿ.

**ಭೋಜನ : ಮಧ್ಯಾಹ್ನ 12.30ಕ್ಕೆ**

**ಎಸ್.ಜೆ. ಎಂ. ಕನ್ವೆನ್‌ಷನ್ ಹಾಲ್ ರಿಂಗ್ ರೋಡ್, ದಾವಣಗೆರೆ.**

ತಮ್ಮ ವಿಶ್ವಾಸಿಗಳು:

**ಶ್ರೀಮತಿ ಗೀತಮ್ಮ,** ಕಿರಿಯ ಇಂಜಿನಿಯರ್ ಕಾರ್ಯ ಮತ್ತು ಪಾಲನಾ ವಿಭಾಗ, ಬೆಸ್ಕಾಂ, ದಾವಣಗೆರೆ.

**ಶ್ರೀ ಮಲ್ಲಿಕಾರ್ಜುನ ಎಸ್.ಎಂ** ಎಸ್. ಮುರಿಗೆಪ್ಪ ಪ್ರಾವಿಜನ್ ಸ್ಟೋರ್, ಅಣಜಿ (78ನೇ ವರ್ಷದ ಸಂಭ್ರಮದಲ್ಲಿ)

**ಸಿದ್ದು ಎಸ್.ಎಂ., ಸುನಿಲ್ ಕುಮಾರ್ ಎಸ್.ಎಂ.**

**ಶುಭ ಕೋರುವವರು:**

**ಶ್ರೀ ಲಿಂ|| ಪಾರ್ವತಮ್ಮ ಶ್ರೀ ಲಿಂ|| ಆಲ್ದಿ ಶಾಂತಪ್ಪನವರು,** ಕಕ್ಕರಗೊಳ್ಳ

**ಶ್ರೀಮತಿ ಶಿವಲೀಲಮ್ಮ ಕೋಂ ಲಿ. ಚಂದ್ರಪ್ಪನವರು,** ನಿಬಗೂರು

**ಶ್ರೀಮತಿ ಸುಶೀಲಮ್ಮ ಲಿಂ. ಎಂ.ಎಸ್. ಗಂಗಾಧರಪ್ಪನವರು,** ಆಲೂರು, ಹಾಸನ ಜಿಲ್ಲೆ.


**ಶ್ರೀಮತಿ ಚಂದ್ರಮತಿ ಶ್ರೀ ಮಾಗನಹಳ್ಳಿ ಈಶಪ್ಪನವರು,** ದಾವಣಗೆರೆ.

**ಶ್ರೀಮತಿ ಗೌರಮ್ಮ ಲಿಂ. ಡಾ. ಬಸಟೆಪ್ಪ,** ಎಂಡಿಎಸ್

**ಶ್ರೀಮತಿ ಲೀಲಮ್ಮ ಶ್ರೀ ಚಂದ್ರಶೇಖರ್ ಎಸ್.ಕೆ.,** ಮಾಜಿ ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ, ಅಣಜಿ.



**ಜನ್ಮ ದಿನದ ಶುಭಾಶಯಗಳು**



ಇಂದು ತಮ್ಮ 86ನೇ ವರ್ಷದ ಹುಟ್ಟು ಹಬ್ಬವನ್ನು ಆಚರಿಸಿ ಕೊಳ್ಳುತ್ತಿರುವ ಶ್ರೀ ವಿನಾಯಕ ಎಜುಕೇಶನಲ್ ಟ್ರಸ್ಟ್‌ನ ಉಪಾಧ್ಯಕ್ಷರಾದ

**ಶ್ರೀ ಕೆ.ಎಂ. ಹೊಳಿಯಪ್ಪನವರಿಗೆ**

ಜನ್ಮ ದಿನದ ಹಾರ್ದಿಕ ಶುಭಾಶಯಗಳು ಭಗವಂತನು ಇವರಿಗೆ ಆಯುರಾರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತೇವೆ.

ಶುಭ ಕೋರುವವರು:

- **ಧನ್ವಂತರಿ ಆಯುರ್ವೇದಿಕ್ ಕ್ಲಿನಿಕ್ ಮತ್ತು ಪಂಚಕರ್ಮ ಸೆಂಟರ್**
- **ಮುದುಕಪ್ಪ ವಂಶಸ್ಥರು ಬಿ. ಕಲಪನಹಳ್ಳಿ, ದಾವಣಗೆರೆ.**



**ಕಾಣೆಯಾಗಿದ್ದಾರೆ**



**ಶ್ರೀಮತಿ ಚೌಡಮ್ಮ**

ಎಂಬ ಭಾವಚಿತ್ರದಲ್ಲಿರುವ 93 ವರ್ಷದ ವೃದ್ಧ ಮಹಿಳೆ ದಿನಾಂಕ 10.6.22ರಂದು ದಾವಣಗೆರೆಯ ಎಸ್.ಪಿ.ಎಸ್ ನಗರ, ಬೂದಾಳ್ ರಸ್ತೆ, 1ನೇ ಮೇನ್, 1ನೇ ಕ್ರಾಸ್ ನಲ್ಲಿರುವ ತಮ್ಮ ನಿವಾಸದಿಂದ ಹೋದವರು ಹಿಂದಿರುಗಿರುವುದಿಲ್ಲ. ಇವರು ಕನ್ನಡ ಮಾತನಾಡುತ್ತಾರೆ. ಇವರ ಸುಳಿವು ಸಿಕ್ಕಲ್ಲಿ ಮೇಲ್ಕಂಡ ವಿಳಾಸಕ್ಕಾಗಲೀ, ಹತ್ತಿರದ ಪೋಲೀಸ್ ಠಾಣೆಗಾಗಲಿ ಅಥವಾ ಕೆಳಗಿನ ಮೊಬೈಲ್‌ಗೆ ತಿಳಿಸಿದಲ್ಲಿ ಸೂಕ್ತ ಬಹುಮಾನ ನೀಡಲಾಗುವುದು.

**ಶೇಖರ್: 84948 74345, 77600 37206**



**ಹಜ್ ಯಾತ್ರೆ – ಶುಭ ಹಾರೈಕೆ**



**ಮೊಹಮ್ಮದ್ ಷರೀಫ್ ರಿತ್ತಿ** **ಚಮನ್ ಸಾಬ್ ಕೆ.** (ಮಾಜಿ ಉಪ ಮಹಾ ಪೌರರು) **ಬಕ್ಷಿ ರಿತ್ತಿ**

ದಿನಾಂಕ 12.06.2022 ರಿಂದ ಪ್ರಾರಂಭವಾಗಲಿರುವ ಪವಿತ್ರ ಹಜ್ ಯಾತ್ರೆಗೆ ತೆರಳುತ್ತಿರುವ


**ಮೊಹಮ್ಮದ್ ಷರೀಫ್ ರಿತ್ತಿ, ಚಮನ್ ಬೀ, ಬಕ್ಷಿ ರಿತ್ತಿ** ಹಾಗೂ ಆತ್ಮೀಯರಾದ **ಚಮನ್ ಸಾಬ್ ಕೆ.**

ಮತ್ತು ಕುಟುಂಬದವರಿಗೆ ಅವರ ಹಜ್ ಯಾತ್ರೆಯು ಯಶಸ್ವಿಯಾಗಲಿ ಹಾಗೂ ಹಜ್ ಯಾತ್ರೆ ಕೈಗೊಳ್ಳುತ್ತಿರುವ ಪ್ರತಿಯೊಬ್ಬರಿಗೂ ಶುಭಾಶಯ ಕೋರುವವರು...

**ಅವರಿಗೆ ಎಲ್ಲಾ ರೀತಿಯ ಶುಭವನ್ನು ಹಾರೈಸುತ್ತಾ ಪರಮ ಶಕ್ತನಾದ ಅಲ್ಲಾಹನು ಅವರ ಯಾತ್ರೆಯನ್ನು ಸುಗಮವಾಗಿರಿಸಲಿ, ಅವರು ಅಂದುಕೊಂಡಂತೆ ಮಕ್ಕಾ ತಲುಪಿ ಸುಗಮವಾಗಿ ಹಜ್ ಕರ್ಮ ನೆರವೇರಿಸಲು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.**



**ಶುಭ ಕೋರುವವರು : ಮೊಹಮ್ಮದ್ ಜಿಕ್ರಿಯಾ ಸ್ನೇಹ ಬಳಗ**








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte